ಉಪನ್ಯಾಸ ಗ್ರಂಥಮಾಲೆ

೫೨

ಪ್ರಾಚೀನ ಭಾರತದ ರಾಜ್ಯಪದ್ಧತಿ

ಸಿ. ಶ್ರೀ. ರಂಗಸ್ವಾಮಿ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೧೯೬೮

ಉಪನ್ಯಾಸ ಗ್ರಂಥಮಾಲೆ

೧. ಭವಭೂತಿ (ದ್ವಿತೀಯ ಆವೃತ್ತಿ) –ಕೆ. ಕೃಷ್ಣಮೂರ್ತಿ
೨. ಮನೋರೋಗಗಳು (,,) –ಎಸ್. ಆರ್. ಕುಲಕರ್ಣಿ
೩. ಪ್ರಥಮ ಪಂಚವಾರ್ಷಿಕ ಯೋಜನೆ
ಹಾಗೂ ಒಕ್ಕಲುತನ –ಎಸ್. ಪಿ. ಪಾಟೀಲ
೪. ಗಾದೆಗಳು (ತೃತೀಯ ಆವೃತ್ತಿ) –ಎ. ಕೆ. ರಾಮಾನುಜನ್
೫. ಭಾರತದಲ್ಲಿ ಜಾತಿ ಪದ್ಧತಿ (ದ್ವಿ. ಆ.)–ವ್ಹಿ. ಎಸ್. ಡಿ'ಸೋಜಾ
೬. ಕೀಟಕ ಪಿಡುಗುಗಳ ಸಮೀಕ್ಷಣೆ (ದ್ವಿ. ಆ.)
–ಎಸ್. ಎಸ್. ಕಟಗಿಹಳ್ಳಿಮಠ
೭. ರಾಜಕೀಯ ಪಕ್ಷಗಳು (ದ್ವಿ. ಆ.)-ಎನ್. ರಾಜಗೋಪಾಲರಾವ್
೮. ಸ್ವಾದಿ ಅರಸುಮನೆತನ (,,)–ಎಸ್. ಎಸ್. ಮಾಳವಾಡ
೯. ಮಕ್ಕಳ ಶಿಕ್ಷಣ (ತೃ. ಆ.) –ಡಿ. ಎಸ್. ಕರ್ಕಿ
೧೦. ಮೂಢ ನಂಬಿಕೆಗಳು (,,) –ಎಲ್. ಆರ್. ಹೆಗಡೆ
೧೧. ಸಂಸ್ಕೃತ ಕವಯಿತ್ರಿಯರು (ದ್ವಿ. ಆ.)–ಕೆ. ಟಿ. ಪಾಂಡುರಂಗಿ
೧೨. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ (,,) –ಬಿ. ವಿರೂಪಾಕ್ಷಪ್ಪ
೧೩. ಸಾರ್ವಜನಿಕ ಆಡಳಿತ (ದ್ವಿ. ಆ.) –ಜಿ. ಎಸ್. ಹಾಲಪ್ಪ
೧೪. ವಿಚಾರವಾದ (,,) –ಗೌರೀಶ ಕೈಕಿಣಿ
೧೫. ಮಹಾಕವಿ ಮಿಲ್ಟನ್ (,,) –ಜಿ. ಎಸ್ ಆಮೂರ
೧೬. ಭಾರತದಲ್ಲಿ ಗ್ರಂಥಾಲಯ ಪ್ರಸಾರ –ಕೆ. ಎಸ್ ದೇಶಪಾಂಡೆ
೧೭. ಭಾರತೀಯ ನಾಗರಿಕತೆಗೆ ಮನುವಿನ
ಕೊಡುಗೆ (ದ್ವಿ. ಆ.) –ಬಿ. ಎಚ್. ಶ್ರೀಧರ
೧೮. ಜನಸಂಖ್ಯೆ ಹಾಗು ಆಹಾರ ಸಮಸ್ಯೆ
–ಪಿ. ಎಂ. ಉಮಾಕಾಂತಶಾಸ್ತ್ರಿ
೧೯. ಸೌರವ್ಯೂಹ –ಸಿ. ಎಸ್. ಶ್ರೀನಿವಾಸ ಅಯ್ಯಂಗಾರ
೨೦. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ
–ಸಿ. ವ್ಹಿ. ರಂಗಸ್ವಾಮಿ
೨೧. ಸಮಾಜ ಕಾರ್ಯ (ದ್ವಿ. ಆ.)–ಎಚ್. ಎಂ. ಮರುಳಸಿದ್ಧಯ್ಯ
೨೨. ಸಂಸತ್ತಿನ ಕಾರ್ಯಪದ್ಧತಿ (,,)–ಎ. ಎಂ. ರಾಜಶೇಖರಯ್ಯ
೨೩. ಕನ್ನಡನಾಡಿನ ಶಾಸನಗಳು (ದ್ವಿ. ಆ.) –ಪಿ. ಬಿ. ದೇಸಾಯಿ
೨೪. ಕವೀಂದ್ರ ರವೀಂದ್ರರು (,,) –ಎಸ್. ಎಸ್. ಮಾಳವಾಡ
೨೫. ನಾಗಾನಂದ (,,) –ಎಚ್. ಪಿ. ಮಲ್ಲೇದೇವರು

ಉಪನ್ಯಾಸ ಗ್ರಂಥಮಾಲೆ

೫೨

ಪ್ರಾಚೀನ ಭಾರತದ ರಾಜ್ಯಪದ್ಧತಿ

ಸಿ. ವಿ. ರಂಗಸ್ವಾಮಿ, ಎಂ.ಎ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೯೬೮

ಪ್ರಕಾಶಕರು :

ಎಸ್.ಎಸ್. ಒಡೆಯರ, ಎಂ. ಎ., ಎಲ್ಎಲ್. ಬಿ.

ರಜಿಸ್ಟ್ರಾರ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಥಮ ಮುದ್ರಣ, ೩,೦೦೦ ಪ್ರತಿಗಳು—ಎಪ್ರಿಲ್, ೧೯೬೬

ದ್ವಿತೀಯ ಮುದ್ರಣ, ೩,೦೦೦ ಪ್ರತಿಗಳು—ಮಾರ್ಚ್, ೧೯೬೮

ಬೆಲೆ : ೨೫ ಪೈಸೆ

ಮುದ್ರಕರು :

ಬಸವರಾಜ ಕಟ್ಟೀಮನಿ

ಸಂಗಮ ಮುದ್ರಣಾಲಯ,

ಸಾಧನಕೇರಿ

ಧಾರವಾಡ—೧.

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವುದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರೆವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ಎಪ್ಪತ್ತೆರಡು ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ

ಪುಸ್ತಕಗಳು ಎರಡು–ಮೂರು ಮುದ್ರಣಗಳನ್ನು ಕಂಡಿರು ವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆ ಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆ ಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಎ. ಎಸ್. ಅಡಕೆ
ಉಪಕುಲಪತಿ
ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ
೧೫–೩–೧೯೬೮

ನಿವೇದನೆ

ಪ್ರಾಚೀನ ಭಾರತದ ರಾಜ್ಯಪದ್ಧತಿಯ ವಿಷಯವು ಅತ್ಯಂತ ವ್ಯಾಪಕವೂ, ಗಹನವೂ ಮತ್ತು ತಿಳಿಯಲು ಕಠಿಣವೂ ಆಗಿದೆ. ಆದರೂ ಸಾಮಾನ್ಯ ಓದುಗರಿಗೆ ಈ ಕಿರುಹೊತ್ತಿಗೆಯ ಮೂಲಕ ರಾಜ್ಯಪದ್ಧತಿಯ ಸೂಕ್ಷ್ಮ ಪರಿಚಯವನ್ನಾದರೂ ಮಾಡಿಕೊಟ್ಟು ಹೆಚ್ಚಿನ ವ್ಯಾಸಂಗಕ್ಕೆ ಅವಕಾಶ ಮಾಡಿ ಕೊಡುವ ಸಾಹಸ ಮಾಡಿದ್ದೇನೆ. ಈ ಕಿರುಹೊತ್ತಿಗೆಯಲ್ಲಿ ದೊರೆಯಬಹುದಾದ ಉತ್ತಮ ವಿಚಾರಗಳನ್ನು ಮಾತ್ರ ತೆಗೆದು ಕೊಳ್ಳಬೇಕಾಗಿ ವಾಚಕರಲ್ಲಿ ಬಿನ್ನಹ.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಸಮಿತಿಯ ಅಂಗವಾಗಿ ಗುಲ್ಬರ್ಗಾ ಜಿಲ್ಲೆಯ ರಂಗಂಪೇಟೆ ಯಲ್ಲಿ ೧೯೬೫ ಫೆಬ್ರವರಿ ತಿಂಗಳಲ್ಲಿ ಜರುಗಿದ ಉಪನ್ಯಾಸ ಶಿಬಿರದಲ್ಲಿ ಹೇಳಿದ ಅನೇಕ ಅಂಶಗಳನ್ನು ವಿಸ್ತರಿಸಿ ಈ ಕಿರು ಹೊತ್ತಿಗೆಯ ರೂಪದಲ್ಲಿ ಪ್ರಕಟಿಸಲಾಗಿದೆ. ಪ್ರಕಟನೆಯ ಮುನ್ನ ನನ್ನ ಹಸ್ತ ಪ್ರತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಉತ್ಕೃಷ್ಟ ಹಾಗೂ ಉಪಯುಕ್ತ ಸಲಹೆಗಳನ್ನು ಕೊಟ್ಟು ಉಪಕರಿಸಿರುವ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತದ ಇತಿಹಾಸ, ಸಂಸ್ಕೃತಿ ಶಾಖೆ ಮತ್ತು ಕನ್ನಡ ಸಂಶೋಧನ ಶಾಖೆಯ ನಿರ್ದೇಶಕರೂ, ನನ್ನ ಪೂಜ್ಯ ಗುರುಗಳೂ ಆಗಿ ರುವ ಡಾ॥ ಪಿ. ಬಿ. ದೇಸಾಯಿ ಅವರಿಗೆ ನನ್ನ ಹೃತ್ಪೂರ್ವಕ

ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಹಸ್ತ ಪ್ರತಿಯನ್ನು ಶೀಘ್ರದಲ್ಲಿ ಸಿದ್ಧಗೊಳಿಸಲು ಸ್ಫೂರ್ತಿನೀಡಿದ ಪ್ರಕಟನಾಶಾಖೆಯ ನಿರ್ದೇಶಕರಾಗಿರುವ ಶ್ರೀಮಾನ್ ಸಿ. ಎಸ್. ಕಣವಿ ಅವರಿಗೂ ಮತ್ತು ಕನ್ನಡ ಸಂಶೋಧನಾ ಶಾಖೆಯಲ್ಲಿ ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ಬೋಧಕರಾಗಿರುವ ನನ್ನ ಗೆಳೆಯರು ಡಾ॥ ಬಿ. ಆರ್. ಗೋಪಾಲ ಅವರಿಗೂ ನಾನು ಚಿರಋಣಿ.

ಇಂಥ ಒಂದು ಸದವಕಾಶವನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹ ಕೊಡುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿ ವರ್ಗದವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ರಂಗ ಲಕ್ಷ್ಮಿಕೃಪಾ	ಸಿ. ವ್ಹಿ. ರಂಗಸ್ವಾಮಿ
ಯಾದಗಿರಿ	ಪ್ರಿನ್ಸಿಪಾಲ್,
೨೩–೩–೧೯೬೬	ಶಂಕರ ಕಾಲೇಜು

ಪರಿವಿಡಿ

ಪ್ರಾಚೀನ ಭಾರತದ ರಾಜ್ಯಪದ್ಧತಿ

೧. ಪೂರ್ವವಿವೇಚನೆ

ಕ್ರಿ. ಶ. ೧೯೪೭ ರಲ್ಲಿ ಭಾರತ ದೇಶವು ಸ್ವತಂತ್ರವಾಗಿ ೪ ವರ್ಷಗಳ ತರುವಾಯ ಗಣರಾಜ್ಯವೆನಿಸಿಕೊಂಡಂದಿನಿಂದ ನಾಲ್ಕು ಸಾರ್ವತ್ರಿಕ ಚುನಾವಣೆಗಳು ನಡೆದು ಅವುಗಳ ಪರಿಣಾಮವಾಗಿ ಭಾರತೀಯ ಪೌರರಲ್ಲಿ ರಾಜಕೀಯ ಜಾಗ್ರತಿಯುಂಟಾಗಿದೆ; ಮತ್ತು ರಾಷ್ಟ್ರೀಯ ಮನೋಭಾವ ಬೆಳೆಯುತ್ತ ಬಂದಿದೆ. ನಮ್ಮ ರಾಜ್ಯದ ಆಡಳಿತವನ್ನು ನಾವೇ ನಡೆಸುತ್ತಿರುವ ಈ ಸಂದರ್ಭದಲ್ಲಿ ಪ್ರಾಚೀನ ಭಾರತದ ರಾಜ್ಯಪದ್ಧತಿಯ ಪರಿಚಯ ಆವಶ್ಯಕ.

ಪ್ರಾಚೀನ ಭಾರತದ ರಾಜ್ಯಪದ್ಧತಿಯ ಇತಿಹಾಸವು ಸುಮಾರು ೩೦೦೦ ವರ್ಷಗಳ ಇತಿಹಾಸವೆಂದು ಹೇಳಬಹುದು. ಈ ಅವಧಿಯಲ್ಲಿ ಭಾರತದ ರಾಜನೀತಿ ಶಾಸ್ತ್ರಜ್ಞರನೇಕರು ರಾಜ್ಯಪದ್ಧತಿಯ ತತ್ವಗಳನ್ನು ರೂಪಿಸಿದ್ದಾರೆ. ಈ ತತ್ವಗಳನ್ನೊಳಗೊಂಡ ರಾಜ್ಯಪದ್ಧತಿಯ ಆಧಾರದಮೇಲೆ ಹಿಂದಿನ

ಅರಸರು ಸುಭದ್ರವಾದ ವ್ಯವಸ್ಥೆಯನ್ನು ನಿಯೋಜಿಸಿ, ಊರ್ಜಿತಗೊಳಿಸಿ ಪ್ರವರ್ಧಮಾನಕ್ಕೆ ತಂದು ದೇಶವನ್ನು ಸೂಕ್ತಮಾರ್ಗದಲ್ಲಿ ಸಾಗಿಸಿಕೊಂಡು ಹೋದರು. ಪ್ರಾಚೀನ ಕಾಲದ ಅನೇಕ ಗ್ರಂಥಗಳು ರಾಜ್ಯಪದ್ಧತಿಯ ಮೂಲವನ್ನೂ ಮತ್ತು ಪ್ರಗತಿಯನ್ನೂ ತಿಳಿಸುತ್ತವೆ.

ಪ್ರಾಚೀನ ಭಾರತದಲ್ಲಿ ಏಕಾಧಿಕಾರದ ರಾಜ್ಯಸಾಮ್ರಾಜ್ಯಗಳು ನಿರ್ಮಾಣವಾಗಿ ಅವು ಅವಿಚ್ಛಿನ್ನವಾಗಿ ನಡೆದು ಬರಲು ಆಗಿಂದಾಗ್ಗೆ ರಾಜಕೀಯ ಬದಲಾವಣೆಗಳುಂಟಾಗುತ್ತಿದ್ದವು. ಆದರೂ ರಾಜ್ಯಸಾಮ್ರಾಜ್ಯಗಳೂ ಗಣರಾಜ್ಯ ಮತ್ತು ನಾಯಕ ಪ್ರಧಾನ ರಾಜ್ಯಗಳೂ ಆಡಳಿತದಲ್ಲಿ ಒಂದು ಕ್ರಮವನ್ನು ಅನುಸರಿಸಿದ್ದವು. ಅಂದರೆ ರಾಜ್ಯಪದ್ಧತಿಗಳ ಬೆಳವಣಿಗೆ ನಿರಂತರವಾಗಿ ನಡೆದು ಅವು ತಾತ್ವಿಕ ಧ್ಯೇಯರೂಪವಾಗಿ ಮಾತ್ರ ಉಳಿಯದೇ ವಾಸ್ತವಿಕ ಪ್ರಪಂಚದಲ್ಲಿ ಜನತೆಗೆ ಹಿತವನ್ನುಂಟು ಮಾಡಿದವು; ಸಮಾಜಕ್ಕೆ ಉಪಯುಕ್ತವೆನಿಸಿದವು; ಆದ್ದರಿಂದಲೇ ಅವು ಸಾವಿರಾರು ವರ್ಷಗಳವರೆಗೆ ಆಚರಣೆಯಲ್ಲಿದ್ದವು. ಪ್ರಾಚೀನ ಭಾರತವು ಏಳಿಗೆಯಲ್ಲಿದ್ದ ಕಾಲದಲ್ಲಿ ಪ್ರಪಂಚದ ಇತರ ನಾಗರಿಕ ರಾಜ್ಯಗಳಲ್ಲಿ ರಾಜ್ಯಪದ್ಧತಿಗಳೇನೋ ಆಚರಣೆಯಲ್ಲಿದ್ದವು. ಆದರೆ ಆ ರಾಜ್ಯಗಳು ಮುಂದಿನ ಪೀಳಿಗೆಗೆ ಹೆಚ್ಚಿನ ಪ್ರಯೋಜನಗಳನ್ನು ಉಂಟುಮಾಡಿಲ್ಲ. ಭಾರತದಲ್ಲಿ ಮಾತ್ರ ಗತ ಕಾಲದಲ್ಲಿ ಏನೇನು ರಾಜಕೀಯ ಘಟನೆಳು ಆಗಿ ಹೋಗಿದ್ದರೂ ಪ್ರಾಚೀನ ರಾಜ್ಯಪದ್ಧತಿಯ ಮುಖ್ಯಾಂಶಗಳು ಆಧುನಿಕ ಕಾಲಕ್ಕೂ ಭದ್ರವಾಗಿ ಉಳಿದುಕೊಂಡು ಬಂದಿವೆ: ಮತ್ತು ಪ್ರಾಚೀನ ಕಾಲದಿಂದ

ಆಧುನಿಕ ಕಾಲದವರೆಗೂ ವಿಚಾರಸರಣಿಯು ಒಂದೇ ಆಗಿದ್ದು ರಾಜ್ಯಪದ್ಧತಿಯು ಅವಿಚ್ಛಿನ್ನತೆ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಪದ್ಧತಿಯನ್ನು ವರ್ಣಿಸಿರುವ ಗ್ರಂಥಗಳಲ್ಲಿ ಅನೇಕಾವರ್ತಿ ಹೇಳಲ್ಪಟ್ಟಿರುವ ವಿಚಾರಗಳೇ ಇವೆಯೆಂದೂ, ಸಾಂಪ್ರದಾಯಿಕ ತತ್ವಗಳು ಅಡಕವಾಗಿವೆಯೆಂದೂ ಕೆಲವರು ಆಕ್ಷೇಪಣೆ ಮಾಡಿ-ದ್ದಾರೆ. ಆದರೆ ಕ್ರಿ. ಪೂ. ೫೦೦ ರ ನಂತರ ರಾಜ್ಯಪದ್ಧತಿಯು ಬೆಳವಣಿಗೆಯು ವಿಶಿಷ್ಟತೆಯಿಂದ ಕೂಡಿ ಲೌಕಿಕ ರೀತಿಯಲ್ಲಿ ಪ್ರಗತಿಹೊಂದುತ್ತ ಬಂದಿತು. ಪ್ರಾಚೀನ ರಾಜ್ಯಶಾಸ್ತ್ರಜ್ಞರು ರಾಜ್ಯಕ್ಕೆ ಸಂಬಂಧಿಸಿದ ಮೂಲಭೂತ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಬಗೆಹರಿಸಿ ನಿರ್ಧರಿಸಿರುವರೋ ಆ ಸಿದ್ಧಾಂತಗಳೇ ನಿಯಮದಲ್ಲಿ ಆಧುನಿಕ ರಾಜ್ಯಶಾಸ್ತ್ರಜ್ಞರ ವಿಚಾರಗಳಿಗೆ ಸಮ-ವಾಗುತ್ತವೆ: ಆಧುನಿಕ ಪದಗಳ ಪ್ರಯೋಗದೊಂದಿಗೆ ಕೆಲವು ವಿಚಾರಗಳನ್ನು ಈಗಿನ ವೈಜ್ಞಾನಿಕ ಯುಗಕ್ಕೆ ತಕ್ಕಂತೆ ಮಾರ್ಪಾಟು ಮಾಡಿಕೊಂಡು ಈಗಿನ ರಾಜ್ಯಶಾಸ್ತ್ರಗಳು ನಡೆ-ದಿವೆ. ಆದಕಾರಣ ಪ್ರಾಚೀನ ಭಾರತದ ರಾಜ್ಯಪದ್ಧತಿ ಮತ್ತು ಆ ಪದ್ಧತಿಯ ಬೆಳೆವಣಿಗೆಗೆ ಕಾರಣೀಭೂತರಾದ ಮಹಾ ವ್ಯಕ್ತಿ-ಗಳು ಮತ್ತು ಅವರ ಉದ್ಗ್ರಂಥಗಳ ಪರಿಚಯು ಆಧುನಿಕ ಕಾಲಕ್ಕೂ ಅತ್ಯವಶ್ಯವೆನಿಸಿದೆ.

೨. ಪ್ರಾಚೀನ ಭಾರತದ 'ರಾಷ್ಟ್ರ'ದ ಸ್ವರೂಪ

ಪ್ರಾಚೀನ ಭಾರತದಲ್ಲಿ ರಾಜ್ಯಕ್ಕೇ 'ರಾಷ್ಟ್ರ' ಎಂಬ ಆಧುನಿಕ ಪದಪ್ರಯೋಗ ರೂಢಿಯಲ್ಲಿತ್ತು. ಈ ರಾಷ್ಟ್ರವು ನಾವು ಭಾಗಿಗಳಾಗಿರುವ ಸಾಮಾಜಿಕ ಸಂಘಗಳಲ್ಲೆಲ್ಲಾ ಅತಿ ಮುಖ್ಯವಾದುದು; ಮಾನವನ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ರಾಷ್ಟ್ರವು ಅನಿವಾರ್ಯ ವಾದುದು. ರಾಷ್ಟ್ರದ ಪ್ರಮುಖ ಅಂಗವೆನಿಸಿರುವ ಪ್ರಭುತ್ವವು ಶಾಸನಗಳನ್ನು ಅನುಷ್ಠಾನಕ್ಕೆ ತಂದು ಅವುಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ವಿಧಿಸುವ [ದಂಡ] ಅಧಿಕಾರಗಳ ಮೂಲಕ ಸಮಾಜದಲ್ಲಿ ಸುವ್ಯವಸ್ಥೆಯನ್ನೇರ್ಪಡಿಸುತ್ತದೆ. ಪಾಶ್ಚಾತ್ಯ ಶಾಸ್ತ್ರಜ್ಞರ ರೀತ್ಯಾ ಈ ರಾಷ್ಟ್ರದ ಪ್ರಮುಖ ಅಂಗಗಳು ಯಾವುವೆಂದರೆ– ಪ್ರದೇಶ, ಜನಸಾಂದ್ರತೆ, ರಾಜ್ಯಶಾಸನ ಮತ್ತು ಪ್ರಭುಶಕ್ತಿ. ಪ್ರಾಚೀನ ಭಾರತದ ಶಾಸ್ತ್ರಜ್ಞರ ರೀತ್ಯಾ ರಾಜ್ಯದ ಪ್ರಮುಖ ಅಂಗಗಳನ್ನು ಮುಂದೆ ವಿವರಿಸಲಾಗಿದೆ.

ಪ್ರಾಚೀನ ಭಾರತದ ರಾಜ್ಯಪದ್ಧತಿಯ ಪರಿಚಯವನ್ನು ಆ ಕಾಲದ ಉದ್ಗ್ರಂಥಗಳೆನಿಸಿದ ವೇದಗಳು, ರಾಮಾಯಣ, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ ಮೊದಲಾದ ಧಾರ್ಮಿಕ, ದಾರ್ಶನಿಕ ಮತ್ತು ಲೌಕಿಕ ಗ್ರಂಥಗಳು ತಿಳಿಸುತ್ತವೆ. ಇವುಗಳಲ್ಲೆಲ್ಲಾ ಕೌಟಿಲ್ಯನ ಅರ್ಥಶಾಸ್ತ್ರವು ಪ್ರಧಾನ

ವಾದುದು. ಈ ಗ್ರಂಥಗಳಿಂದ ರಾಜ್ಯಶಾಸ್ತ್ರಕ್ಕೆ-ನೃಪಶಾಸ್ತ್ರ, ನೀತಿಶಾಸ್ತ್ರ, ದಂಡನೀತಿ, ರಾಜಧರ್ಮ, ಅರ್ಥಶಾಸ್ತ್ರ ಎಂಬ ಬೇರೆ ಬೇರೆ ಹೆಸರುಗಳೂ ಬಳಕೆಯಲ್ಲಿದ್ದವೆಂದು ತಿಳಿದು ಬರುತ್ತದೆ.

ರಾಷ್ಟ್ರದ ನಿರ್ಮಾಣದ ವಿಚಾರವಾಗಿ ಮಹಾಭಾರತದ ಶಾಂತಿಪರ್ವ ಮತ್ತು ದೀಘನಿಕಾಯ ಎಂಬ ಬೌದ್ಧಗ್ರಂಥವು ಕೆಲವು ಸಿದ್ಧಾಂತಗಳನ್ನು ಪ್ರತಿಪಾದಿಸುತ್ತವೆ. ಇವುಗಳ ಪ್ರಕಾರ, ರಾಷ್ಟ್ರವು ಜಗತ್ತಿನಲ್ಲಿ ಕಾಣಬಹುದಾದ ಮತ್ಸ್ಯ ನ್ಯಾಯ (ಬಲಿಷ್ಠನು ದುರ್ಬಲರನ್ನು ಆಕ್ರಮಣ ಮಾಡುವ) ನೀತಿಯ ವಿರುದ್ಧವಾಗಿ ಮಾನವನ ರಕ್ಷಣೆ ಮತ್ತು ಹಿತಚಿಂತ ನೆಗೆ ನಿರ್ಮಾಣವಾಯಿತೆಂದು ಗೊತ್ತಾಗುತ್ತದೆ. ಹೀಗೆ ಪಾಶ್ಚಾತ್ಯರಾಜ್ಯ ಶಾಸ್ತ್ರಜ್ಞರ ಪ್ರಕಾರವೂ ರಾಷ್ಟ್ರದ ನಿರ್ಮಾಣದ ಬಗ್ಗೆ ಹಲವಾರು ಸಿದ್ಧಾಂತಗಳಿವೆ. ಅವುಗಳಲ್ಲೆಲ್ಲಾ, ರಾಷ್ಟ್ರವು ಸರ್ವರ ಸಮ್ಮತಿಯಿಂದ ಸೃಷ್ಟಿಯಾದದ್ದೆಂದೂ, ಈ ಸಮ್ಮ ತಿಯೇ ರಾಷ್ಟ್ರದ ಆಡಳಿತಕ್ಕೆ ಅವಶ್ಯಕವಾದ ಆಧಾರವೆಂದೂ ಹೇಳಲಾದ ಫ್ರಾನ್ಸ ದೇಶದ ರೂಸೊ ಎಂಬ ಶಾಸ್ತ್ರಜ್ಞನು ಮಂಡಿಸಿದ ಅಭಿಪ್ರಾಯವು ಕ್ರಿ. ಶ. ೧೯ ನೆಯ ಶತಕದಿಂದೀಚೆಗೆ ಹೆಚ್ಚಿನ ಪರಿಣಾಮವನ್ನುಂಟುಮಾಡಿದ ನಂತರವೂ ಮಾನವನ ಕಲ್ಯಾಣ ಸಾಧನೆಯೇ ರಾಷ್ಟ್ರದ ಗುರಿಯೆಂದು ಪ್ರತಿಪಾದಿಸುವ ಅನೇಕ ತತ್ವಗಳು ಉದಯಿಸಿದವು.

ವಾಸ್ತವಿಕ ದೃಷ್ಟಿಯಿಂದ ನೋಡುವದಾದರೆ ಪ್ರಾಚೀನ ಭಾರತದಲ್ಲಿ ಪಿತೃಪ್ರಧಾನವಾದ ಸಮಷ್ಟಿ ಕುಟುಂಬವೇ ರಾಷ್ಟ್ರದ

ಮತ್ತು ಅರಸನ ಉದಯಕ್ಕೆ ಕಾರಣವಾಯಿತು. ಕುಟುಂಬದ ಸ್ವತ್ತು, ಸ್ತ್ರೀಯರ ಪಾವಿತ್ರ್ಯರಕ್ಷಣೆ ಮತ್ತು ಕೌಟುಂಬಿಕ ಸುಸ್ಥಿತಿಯನ್ನು ಕಾಪಾಡುವದಕ್ಕಾಗಿ ರಾಷ್ಟ್ರದ ನಿರ್ಮಾಣವಾಯಿತು. ಅರಸನಿಂದ ವ್ಯತಿರಿಕ್ತವಾಗಿ ರಾಷ್ಟ್ರವಿಲ್ಲ; ರಾಷ್ಟ್ರವಿಲ್ಲದೇ ಅರಸನಿಲ್ಲವೆಂಬ ಕೌಟಿಲ್ಯನ ಹೇಳಿಕೆಯು ಅರಸು ಮತ್ತು ರಾಷ್ಟ್ರಕ್ಕಿರುವ ಬಾಂಧವ್ಯವನ್ನು ಸ್ಪಷ್ಟಪಡಿಸುತ್ತದೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕ್ರಿ. ಶ. ೧೮ ಮತ್ತು ೧೯ ನೆ ಶತಮಾನಗಳಲ್ಲಿದ್ದಂತೆ ವ್ಯಕ್ತಿಯ ಕ್ಷೇಮಕ್ಕೆ ರಾಷ್ಟ್ರವು ಸಂಬಂಧಿಸಿಲ್ಲವೆಂಬ ಲೇಸೆಫೇ (Laissez faire) ತತ್ವಕ್ಕೆ ಪ್ರಾಚೀನ ಭಾರತದಲ್ಲಿ ಪುರಸ್ಕಾರವಿರಲಿಲ್ಲ. ಪ್ರಾಚೀನಕಾಲದ ರಾಜ್ಯಗಳ ಕರ್ತವ್ಯ ನಿರ್ವಹಣೆಯ ವ್ಯಾಪ್ತಿಯನ್ನು ಪರಿಶೀಲಿಸಿದರೆ ಜನತೆಯ ಕಲ್ಯಾಣಕ್ಕಾಗಿಯೂ ಮತ್ತು ವ್ಯಕ್ತಿಯ ಸಂಪೂರ್ಣ ಬೆಳವಣಿಗೆಗೂ ಯಾವ ಯಾವ ಕರ್ತವ್ಯಗಳನ್ನು ನೆರವೇರಿಸಬೇಕೋ ಅವೆಲ್ಲವನ್ನೂ ಆಚರಣೆಯಲ್ಲಿ ತರಬೇಕೆಂಬ ಆದರ್ಶ ಕಂಡುಬರುತ್ತದೆ. ಸಿಂಧೂನದಿ ಕೊಳ್ಳದ ಸಭ್ಯತೆ, ವೇದಗಳ ಕಾಲ, ಮೌರ್ಯ, ಗುಪ್ತ, ಶ್ರೀ ಹರ್ಷನ ರಾಜ್ಯಗಳಲ್ಲಿಯೂ ಮತ್ತಿತರ ಸಣ್ಣ ಸಣ್ಣ ರಾಜ್ಯಗಳಲ್ಲಿಯೂ, ಮೇಲೆ ಹೇಳಿದ ಆದರ್ಶ ಪಾಲಿಸಲ್ಪಟ್ಟಿತ್ತೆಂದು ಇತಿಹಾಸವು ತಿಳಿಸುತ್ತದೆ. ಅಶೋಕ ಮೌರ್ಯನ ಶಾಸನಗಳಲ್ಲೊಂದರಲ್ಲಿ ಹೇಳಿರುವಂತೆ ಅರಸನು ಪ್ರಜೆಗಳನ್ನು ತನ್ನ ಮಕ್ಕಳೆಂದೇ ಭಾವಿಸಿ, ಪ್ರೀತಿವಾತ್ಸಲ್ಯಗಳಿಂದ ತುಂಬಿದ ತಂದೆಯಂತೆಯೇ ಅವರ ಕ್ಷೇಮ

ಕ್ಕಾಗಿ ಅನವರತ ಶ್ರಮಿಸುವದು ಅಗತ್ಯವೆಂಬ ಆದರ್ಶ ಪಾಲನೆಗಿಂತ ಮಿಗಿಲಾದುದು ಮತ್ತೊಂದಿಲ್ಲ!

ಪ್ರಾಚೀನ ಭಾರತದ ರಾಜ್ಯಗಳು ತಿಬೇಟು, ವ್ಯಾಟಿಕನ್ ನಗರ ಮುಂತಾದ ರಾಜ್ಯಗಳಂತೆ ಧರ್ಮರಾಜ್ಯಗಳಾಗಿರಲಿಲ್ಲ; ಅರಸನಲ್ಲಿಯೇ ಅಧಿಕಾರಗಳೆಲ್ಲವೂ ಕೇಂದ್ರೀಕೃತವಾಗಿದ್ದರೂ ವಿಕೇಂದ್ರೀಕೃತದ ನಿಯಮಗಳು ಆಚರಣೆಯಲ್ಲಿದ್ದವು; ಕೆಲವು ರಾಜ್ಯಗಳಲ್ಲಿ ಕರ ವಸೂಲಿ ಅಧಿಕ ಪ್ರಮಾಣದಲ್ಲಿದ್ದರೂ ಪ್ರಜೆಗಳ ಹಿತವನ್ನು ನಿರ್ಲಕ್ಷಿಸುತ್ತಿರಲಿಲ್ಲ; ಆ ಕಾಲದಲ್ಲಿ ಸರ್ವವ್ಯಾಪಿಯಾದ ಧರ್ಮವೇ ಮಾನವನ ಹಿತ ಸಂಬಂಧಗಳ ವ್ಯಾಪಕವಾದಂಥ ನೀತಿ ನಿಯಮವಾಗಿತ್ತು; ಅರಸನು ರಾಜ ಧರ್ಮದ ಕಟ್ಟುನಿಟ್ಟುಗಳಿಂದ ಬಂಧಿತನಾಗಿ ಪ್ರಜೆಗಳ ಸೌಖ್ಯಕ್ಕಾಗಿಯೇ ಶ್ರಮಿಸಿ ತನ್ನ ಆಳಿಕೆಯನ್ನೇ ಗಮನ-ದಲ್ಲಿಟ್ಟಿರುತ್ತಿದ್ದನು.

೩. ಪ್ರಾಚೀನ ಭಾರತದ ರಾಜ್ಯಪದ್ಧತಿ

ಮುಖ್ಯಾಂಶಗಳು :

ಪ್ರಾಚೀನ ಕಾಲದಿಂದಲೂ ವಿಶೇಷವಾಗಿ ಬೆಳವಣಿಗೆಯನ್ನು ಹೊಂದಿ ಊರ್ಜಿತವಾಗಿದ್ದ ರಾಜ್ಯಪದ್ಧತಿಯ ಮುಖ್ಯಾಂಶಗಳು ಈ ರೀತಿ ಇವೆ:- ನಿಯಂತ್ರಣ ಮತ್ತು ಮಿತಿಯಿಂದ ಕೂಡಿದ (Limited Monarchy) ಅರಸ ಪ್ರಧಾನ ರಾಜ್ಯ, ರಾಜನು ಧರ್ಮವನ್ನನುಸರಿಸಿ ಪ್ರಜೆಗಳ ಕಲ್ಯಾಣಕ್ಕಾಗಿ ಶ್ರಮಿಸುವುದು, ವಿಶಿಷ್ಟ ಅರ್ಹತೆಗಳನ್ನು ಪಡೆದಿರುವ ಸಚಿವರುಗಳನ್ನು ನೇಮಿಸಿಕೊಳ್ಳುವುದು. ಸೈನ್ಯ ಮತ್ತು ಯುದ್ಧ ನೀತಿ. ಕರಗಳನ್ನು ವಿಧಿಸುವುದು. ಪ್ರಾಂತ್ಯಾಡಳಿತ. ಸ್ಥಾನಿಕ ಆಡಳಿತ. ಗ್ರಾಮ ಸಭೆಗಳ ಮಹತ್ವ ಸ್ಥಾನ. ತುರ್ತು ಪರಿಸ್ಥಿತಿ ಒದಗಿದಾಗ ಅನುಸರಿಸಬೇಕಾದ ನೀತಿ, ನ್ಯಾಯಾಂಗ ವ್ಯವಸ್ಥೆ. ಗೂಢಚಾರರ ನೇಮಕ. ಅಂತರ ರಾಜ್ಯ ವ್ಯವಹಾರಗಳು ಮತ್ತು ರಾಜಮಂಡಲ ಸಿದ್ಧಾಂತ. ಲೋಭ ಮತ್ತು ಅಸುರ ವಿಜಯಗಳಿಗಿಂತ ಧರ್ಮ ವಿಜಯ ನೀತಿಯನ್ನನುಸರಿಸಿ ಸಾಮ್ರಾಜ್ಯ ಸ್ಥಾಪನೆ. ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಸೌಕರ್ಯಗಳನ್ನೊದಗಿಸುವುದು: " ಸ್ವಹಿತ-ಪರಹಿತ "ವೆಂಬ ಉದಾತ್ತ ನೀತಿಯ ಪಾಲನೆ ಮುಂತಾದವು.

ಸಿಂಧೂ ನದಿಯ ನಾಗರಿಕತೆಯ ಕಾಲ

ಪ್ರಾಚೀನ ಭಾರತದ ರಾಜ್ಯಪದ್ಧತಿಯ ವರ್ಣನೆಯನ್ನು ಸಿಂಧೂನದಿ ನಾಗರಿಕತೆಯ ಕಾಲದಿಂದ ಪ್ರಾರಂಭಿಸುವುದು ಸೂಕ್ತ. ಈ ಕಾಲದಲ್ಲಿ ರಾಷ್ಟ್ರವು ಉತ್ತಮ ಮಟ್ಟದ ವ್ಯವಸ್ಥೆಯಲ್ಲಿತ್ತೆಂದೂ, ಸ್ವಲ್ಪಮಟ್ಟಿಗೆ ಧರ್ಮದ ಆಚಾರಗಳನ್ನವಲಂಬಿಸಿತ್ತೆಂದೂ ತಿಳಿದುಬರುತ್ತದೆ. ಹರಪ್ಪಾದಲ್ಲಿ ದೊರಕಿರುವ ಭೂ ಸಂಶೋಧನೆಯ ಸಾಮಗ್ರಿಗಳ ಪರಿಶೀಲನೆಯಿಂದ ರಾಜ್ಯವು ದೊಡ್ಡ ನಗರಗಳಿಂದ ಕೂಡಿ ಜನತೆಗೆ ಸೌಕರ್ಯಗಳನ್ನೊದಗಿಸುವಂಥ ಸುವ್ಯವಸ್ಥಿತವಾದ ಆಡಳಿತವನ್ನು ಹೊಂದಿತ್ತೆಂಬ ವಿಷಯವು ಸ್ಪಷ್ಟವಾಗುತ್ತದೆ.

ಆರ್ಯರ ಕಾಲ

ಆರ್ಯರು ಭಾರತಕ್ಕೆ ವಲಸೆ ಬಂದು ನೆಲೆಸಿದ ನಂತರ ರಾಜ್ಯಾಡಳಿತವನ್ನು ತಮ್ಮ ತಮ್ಮಲ್ಲೇ ಜನಸಮೂಹಕ್ಕೆ (Tribes) ಮಾತ್ರ ಅನ್ವಯಿಸುವಂತೆ ಏರ್ಪಡಿಸಿಕೊಂಡರು. ತಾವು ಯಾವ ಪ್ರದೇಶದಲ್ಲಿ ವಾಸಮಾಡಿ ಅಲ್ಲಿಯ ಜನರನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡಿದ್ದರೋ ಆ ಪ್ರದೇಶಕ್ಕೆ 'ರಾಷ್ಟ್ರ' ಎಂದು ಕರೆದರು. ಆರ್ಯರು ಗ್ರಾಮಜೀವಿಗಳು; ವ್ಯವಸಾಯ, ಪಶುಪಾಲನೆ ಅವರ ಮುಖ್ಯ ಕಸಬುಗಳು. ಜನಸಮೂಹವೇ ಪ್ರಧಾನವಾಗಿದ್ದ ಸಮಾಜವು ಕ್ರಮೇಣ ಐಕಮತ್ಯ ಹೊಂದುತ್ತ ಬಂದಿತು. ಜನರು ಜೀವನ ಸಾಗಿಸುತ್ತಿದ್ದ ಭೂಭಾಗಕ್ಕೆ ' ವಿಷ್ ' ಎಂಬ ಹೆಸರಿತ್ತೆಂದು ತಿಳಿದುಬರುತ್ತದೆ.

ರಾಜನು ದೈವಾಂಶ ಸಂಭೂತನೆಂಬ ಭಾವನೆ ಆಗಲೇ ಬೆಳೆಯುತ್ತ ಬಂದಿತು; ಇಂದ್ರ, ವರುಣ, ಪ್ರಜಾಪತಿ ಮೊದಲಾದ ದೇವತೆಗಳ ಗುಣಗಳನ್ನು ಪ್ರಜೆಗಳು ತಮ್ಮ ರಾಜನಲ್ಲಿ ಕಂಡರು.

ವೇದಗಳ ಕಾಲದಲ್ಲಿ ಸಭಾ ಮತ್ತು ಸಮಿತಿ ಎಂಬ ಎರಡು ಪ್ರಜಾಡಳಿತದ ಅಂಗಗಳು ಪ್ರಬಲವಾಗಿದ್ದವು. ಸಭಾ ಎಂಬುದು ಗ್ರಾಮಗಳಲ್ಲಿ ಏರ್ಪಡಿಸಲಾಗಿದ್ದ ಸಾಮಾಜಿಕ ಸಭೆ; ಸಮಿತಿ ಎಂಬುದು ರಾಜಕೀಯ ವ್ಯವಹಾರಕ್ಕೆ ಹೆಚ್ಚು ಸಂಬಂಧಿಸಿತ್ತು. ಈ ಎರಡೂ ಅಂಗಗಳು ರಾಜನಿಗೆ ಆಡಳಿತದಲ್ಲಿ ಸೂಕ್ತ ಸಲಹೆಗಳನ್ನು ಕೊಟ್ಟು ರಾಜನು ನೆರವೇರಿಸುವ ಕಾರ್ಯಗಳಿಗೆ ಮನ್ನಣೆ ಕೊಡುತ್ತಿದ್ದವು.

ಅರಸನು ಸಮಾಜದ ಮುಖಂಡ, ಸೇನಾಪತಿ ಮತ್ತು ನ್ಯಾಯಾಧೀಶ. ಅರಸನ ನೇಮಕಕ್ಕೆ ಯೌವ ರಾಜ್ಯಾಭಿಷೇಕ ಕಾಲದಲ್ಲಿ ಪೌರ ಮತ್ತು ಜನಪದದವರೆಲ್ಲರೂ ಸಮ್ಮತಿ ಕೊಡಬೇಕಿತ್ತು. ಅಧರ್ಮಿ ರಾಜನನ್ನು ತಳ್ಳಿಹಾಕುತ್ತಿದ್ದರು. ಪುರಾಣಗಳಲ್ಲಿ ವೇನ ಎಂಬ ಅಧರ್ಮನಿರತನಾದ ಅರಸನನ್ನು ತೆಗೆದುಹಾಕಿ ಸನ್ಮಾರ್ಗ ಪ್ರವರ್ತಕ ರಾಜನನ್ನು ಸಿಂಹಾಸನಕ್ಕೆ ಪ್ರಜೆಗಳು ತಂದ ನಿದರ್ಶನವಿದೆ. ಈ ರೀತಿಯಲ್ಲಿ ಪುರಾತನ ಬ್ರಿಟನ್ನಿನಲ್ಲಿಯೂ ಆಂಗ್ಲೋ ಸಾಕ್ಸನರ ವಿಟನಗೆಮೂಟ್ (witanagemoot) ಎಂಬ ವೃದ್ಧರ ಸಭೆಗೆ ಅಪ್ರಿಯನಾದ ದುಷ್ಟ ರಾಜನನ್ನು ತಳ್ಳಿಹಾಕುವ ಹಕ್ಕಿತ್ತು. ರಾಜನು ಭೂದಾನ ಮಾಡುವಾಗ ಇತರ ಜನರ ಭೂಮಿಗಳಿಗೆ ಬಾಧೆ ಬರದಂತೆ ದಾನ ಕೊಡಬೇಕಿತ್ತು; ಆದರೆ ಪ್ರಜೆಗಳು ಭೂದಾನ ಮಾಡುವಾಗ ರಾಜನ ಅನುಮತಿಯನ್ನು ಪಡೆಯಬೇಕಿರಲಿಲ್ಲ.

ಅರಸನಿಗೆ 'ರಾಜ' ಎಂಬ ಸರಳ ಬಿರುದು ಇತ್ತು. ಸಮ್ರಾಟ್ ಮತ್ತು ಅಧಿರಾಟ್ ಎಂಬ ಹೆಚ್ಚಿನ ಬಿರುದುಗಳು ಬಳಕೆಯಲ್ಲಿ ಬಂದಿರಲಿಲ್ಲ. ರಾಜನ ಪಟ್ಟಾಭಿಷೇಕ ಕಾಲಕ್ಕೆ 'ದಶರತ್ನಿಗಳು' ಆಸ್ಥಾನದಲ್ಲಿದ್ದು ಕಾರ್ಯ ಕಲಾಪಗಳಲ್ಲಿ ಭಾಗವಹಿಸುತ್ತಿದ್ದರೆಂದು ಗ್ರಂಥಗಳಿಂದ ತಿಳಿದುಬರುತ್ತದೆ. ಇವರು ಯಾರೆಂದರೆ— ಪುರೋಹಿತ, ರಾಜನ್ಯ, ಸೇನಾನಿ, ಸೂತ, ಗ್ರಾಮಣಿ, ಕ್ಷತ್ರಿಯ, ಸಂಗ್ರಹಿತೃ, ಭಾಗದುಗ್, ಅಕ್ಷಾವಾಪ, ಪರಿವೃತ್ತಿ. ರಾಜನ ಅಭಿಷೇಕ ಕಾಲದಲ್ಲಿ ಸೇರಿದ ಪ್ರಮುಖರು, "ನಮಗೆ ಸೋಮನೇ ರಾಜನು. ಇವನು ಧರ್ಮಗೋಪ್ತನಾದುದರಿಂದ ಇವನನ್ನು ರಾಜನೆಂದು ಅಂಗೀಕರಿಸುತ್ತೇವೆ" ಎಂದು ಅಭಿಷೇಕ ಮಾಡುತ್ತಿದ್ದರು; ನಂತರ ಸಮಸ್ತ ಪ್ರಜೆಗಳಿಗೆ ತಿಳಿಯುವಂತೆ ರಾಜನೆಂದು ಘೋಷಿಸುತ್ತಿದ್ದರು.

ಐತರೇಯ ಬ್ರಾಹ್ಮಣದಲ್ಲಿ ರಾಜಕೀಯ ವ್ಯವಹಾರಗಳ ವಿಚಾರವಾಗಿ ಹೆಚ್ಚಿನ ಅಂಶಗಳು ತಿಳಿದುಬರುತ್ತವೆ.

ಗಣರಾಜ್ಯಗಳು

ಮಹಾವೀರ ಮತ್ತು ಗೌತಮಬುದ್ಧರ ಕಾಲಕ್ಕೆ ಹಲವಾರು ಗಣರಾಜ್ಯಗಳು ಏರ್ಪಟ್ಟು ಪ್ರತಿನಿಧಿ ಪ್ರಭುತ್ವದ ತತ್ವಗಳನ್ನನುಸರಿಸಿ ಆಡಳಿತ ನಡೆಸುತ್ತಿದ್ದವು. ಈ ಗಣರಾಜ್ಯಗಳು ಸಂಘಗಳನ್ನನುಸರಿಸಿ ಏಕರೀತಿಯಾದ ವೃತ್ತಿಯನ್ನು ಆಚರಿಸುತ್ತಿದ್ದುದರ ಪರಿಣಾಮವಾಗಿ ಸಾಮಾಜಿಕ ಐಕ್ಯತೆಯನ್ನು ಹೊಂದಿದ್ದವು. ಕ್ರಿ.ಪೂ. ೬ ನೆ ಶತಮಾನದಲ್ಲಿ

೧೬ ಜನಪದ ಅಥವಾ ಗಣರಾಜ್ಯಗಳಿದ್ದವು. ಇವುಗಳು ಯಾವುವೆಂದರೆ–ಲಿಚ್ಛವಿ, ಮಲ್ಲ, ಮುದ್ರಕ, ಕುರುಪಾಂಚಾಲ, ವೃಷ್ಣಿ, ಸಾತ್ವಕ, ಅಂಬಷ್ಠ, ಯೌಧೇಯ, ಕ್ಷುದ್ರಕ, ವಾಹ್ಲೀಕ, ಅಪರಾಂತ, ಅರ್ಜುನಾಯನ, ಮಾಳವ, ಕಾಂಭೋಜ, ಗಾಂಧಾರ, ಭೋಜಕ. ಇವುಗಳಲ್ಲದೇ ಚಿಕ್ಕ ಚಿಕ್ಕ ಗಣ–ರಾಜ್ಯಗಳೂ ಇದ್ದವು–ಔದುಂಬರ, ಪೈಟುಕ, ನಾಥಕ. ಈ ಗಣರಾಜ್ಯಗಳಲ್ಲಿ ಅಪಾರ ಸೈನಿಕ ಬಲವಿತ್ತು. ಅದರೂ ಅಲೆಗ್ಝಾಂಡರನೆಂಬ ಗ್ರೀಕ್ ಯೋಧನು ಭಾರತಕ್ಕೆ ಬಂದಾಗ ಪ್ರಸಂಗದಲ್ಲಿ ಗಣರಾಜ್ಯಗಳು ಒಟ್ಟುಗೂಡದೆ ಇದ್ದುದರಿಂದ ಗ್ರೀಕರು ಜಯ ಸಂಪಾದಿಸಲು ಸಾಧ್ಯವಾಯಿತು. ಅಲೆ–ಗ್ಝಾಂಡರನು ತನ್ನ ಸ್ವದೇಶಕ್ಕೆ ಹಿಂತಿರುಗುವಾಗ ಕ್ಷುದ್ರಕರು ಮತ್ತು ಮಲ್ಲರು ತಮ್ಮ ಶಕ್ತಿ ಪ್ರದರ್ಶನ ಮಾಡಿ ಯವನ ಮುಖಂಡನಿಗೆ ಆಶ್ಚರ್ಯವನ್ನುಂಟುಮಾಡಿದರು.

ಗಣರಾಜ್ಯಗಳಲ್ಲಿ ಪ್ರಜಾಪ್ರಭುತ್ವ ನಿಯಮಗಳು ಆಚರಣೆಯಲ್ಲಿದ್ದವು. ರಾಜ್ಯದ ಸರ್ವಾಧಿಕಾರವು ಒಂದು ಸಭೆಗೆ ಇರುತ್ತಿತ್ತು. ಈ ಸಭೆಗೆ ಸದಸ್ಯರು ಶ್ರೀಮಂತ ವರ್ಗದವರಿಂದ ಆಯ್ಕೆಯಾಗುತ್ತಿದ್ದರು. ಅಧಿಕಾರವೆಲ್ಲವೂ ಕೆಲವು ಮನೆ–ತನಗಳಲ್ಲಿ ಕೇಂದ್ರೀಕೃತವಾಗಿತ್ತು. ಸಾಮಾನ್ಯ ಜನರು ಅಷ್ಟೇನೂ ಹೆಚ್ಚಿನ ಅಧಿಕಾರವನ್ನೇನೂ ಹೊಂದಿರಲಿಲ್ಲ: ಶ್ರೀಮಂತ ಸದಸ್ಯರು ಸೂಚಿಸಿದ ಆಜ್ಞೆಗಳನ್ನು. ಸಭೆಯು ನಿರ್ಧಾರಗಳನ್ನೂ ಅವರು ಕಾರ್ಯರೂಪಕ್ಕೆ ತರಬೇಕಿತ್ತು.

ಸಭೆಯ ಕಾರ್ಯಕ್ರಮದ ವಿವರಗಳು ತಿಳಿಯಲು ಲಭ್ಯವಾಗಿವೆ. ಸಭೆಯು ಸೇರಲು ಅದಕ್ಕಾಗಿ ಏರ್ಪಡಿಸ

ಲಾದ ಮಂಟಪವಿತ್ತು. ಸಭಾಗೃಹದಲ್ಲಿ ಆಸನ ಪ್ರಜ್ಞಾಪಕನೆಂಬ ಅಧಿಕಾರಿಯು ಸದಸ್ಯರ ಅರ್ಹತೆಗೆ ತಕ್ಕಂತೆ ಆಸನಗಳನ್ನು ಏರ್ಪಡಿಸಿ ಚುನಾವಣೆಯಲ್ಲಿ ಭಾಗವಹಿಸಲು ಅರ್ಹರಾರೆಂಬುದನ್ನು ನಿರ್ಣಯಿಸುತ್ತಿದ್ದನು. ಅನಂತರ ಕರ್ಮವಾಚಕನೆಂಬ ಅಧಿಕಾರಿಯು ಚರ್ಚೆಗೆ ಬಂದ ಸಲಹೆಗಳನ್ನು ಮೂರಾವರ್ತಿ ಸಭೆಯವರಿಗೆ ತಿಳಿಸುತ್ತಿದ್ದನು. ಸಲಹೆಗಳಿಗೆ ಜ್ಞಪ್ತಿ ಎಂದು ಕರೆಯುತ್ತಿದ್ದರು. ಸಲಹೆಗಳನ್ನು ತಿಳಿಸಿದಾಗ ಸಭೆಯವರ ಮೌನ. ಸಮ್ಮತಿ ಸೂಚಕವಾಗಿತ್ತು. ಯಾರಾದರೂ ಅಸಮ್ಮತಿಯನ್ನು ಸೂಚಿಸಬೇಕಾದರೆ ತಮ್ಮ ಅಭಿಪ್ರಾಯವನ್ನು ಸಭೆಯ ಮುಂದೆ ಇಡಬಹುದಿತ್ತು. ಆಗ ತಮ್ಮ ತಮ್ಮಲ್ಲೇ ಆಯ್ಕೆ ಹೊಂದಿದ ಅಧ್ಯಕ್ಷನು (ಮಧ್ಯಸ್ಥ) ಸಲಹೆಗಳ ಮೇಲೆ ನಡೆಯುವ ಚರ್ಚೆಗಳನ್ನು ಹತೋಟಿಯಲ್ಲಿಡುತ್ತಿದ್ದನು; ಮತ್ತು ತನ್ನ ಒಲವಿನ ರೀತಿಗಳಿಂದ ಸಭೆಯಲ್ಲಿ ಗೊಂದಲವಾಗದಂತೆ ನೋಡಿಕೊಳ್ಳುತ್ತಿದ್ದನು. ವಿಷಯ ಪೂರ್ಣವಾಗಿ ಚರ್ಚೆಯಾದನಂತರ ಶಲಾಕಾಗ್ರಾಹಕನೆಂಬ ಅಧಿಕಾರಿಯು ಎಲ್ಲಾ ಸದಸ್ಯರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡುವ ಕಾರ್ಯವನ್ನು ನಿರ್ವಹಿಸಿ ಪೂರ್ಣ ಮಾಡುತ್ತಿದ್ದನು. ಶಲಾಕೆಗಳು ಬಣ್ಣ ಬಣ್ಣಗಳಿಂದ ಮಾಡಲ್ಪಟ್ಟು ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯದ ಸಂಕೇತವಾಗಿದ್ದವು. ಸಭೆಗೆ ಬರದಿದ್ದವರು ಮತ ಕೊಡಲು ಅವಕಾಶವಿರಲಿಲ್ಲ. ಸಭೆಯ ಕಾರ್ಯವನ್ನಾರಂಭಿಸಲು ಕನಿಷ್ಠಪಕ್ಷ ಇಷ್ಟೇ ಸದಸ್ಯರು ಸಭೆಯಲ್ಲಿ ನೆರೆದಿರಬೇಕೆಂಬ (Quorum) ನಿಯಮವಿತ್ತು. ಆದ್ದರಿಂದ ನಿಗದಿಯಾದ ಸಂಖ್ಯೆಯಲ್ಲಿ ಸದಸ್ಯರು ಸಭೆಯಲ್ಲಿ

ಹಾಜರಿರಲು ಗಣಪೂರಕನೆಂಬ ಅಧಿಕಾರಿಯು ಶ್ರಮಿಸುತ್ತಿದ್ದನು.

ಸಭೆಗೆ ಪರದೇಶ ಧೋರಣೆ, ಯುದ್ಧ ಘೋಷಣೆ, ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳುವುದು, ರಾಯಭಾರಿಗಳನ್ನು ಸ್ವೀಕರಿಸುವುದು, ಗಣರಾಜ್ಯದ ಆಡಳಿತವನ್ನು ಚರ್ಚಿಸುವುದು, ನಾಣ್ಯಗಳನ್ನು ಮುದ್ರಿಸುವುದು ಮೊದಲಾದ ಹಕ್ಕುಗಳಿದ್ದವು. ಈ ಕಾರ್ಯಗಳನ್ನು ೫ ರಿಂದ ೬ ಮಂದಿ ಸದಸ್ಯರಿದ್ದ ಸಮಿತಿಗಳು ಸಭಾಧ್ಯಕ್ಷನ ನಿರ್ದೇಶದ ಮೇರೆಗೆ ಹಂಚಿಕೊಳ್ಳುತ್ತಿದ್ದವು. ದೈನಂದಿನ ಆಡಳಿತಕ್ಕೆ ಬೇರೆ ಸಮಿತಿ ನೇಮಕವಾಗುತ್ತಿತ್ತು. ಈ ಸಮಿತಿಗಳೆಲ್ಲವೂ ರಾಜ್ಯದ ಸಭೆಗೆ ಅಧೀನವಾಗಿದ್ದವು. ಸಭೆಯು ಪ್ರಾಂತ್ಯಾಧಿಕಾರಿಗಳನ್ನೂ, ಸೈನ್ಯಾಧಿಕಾರಿಗಳನ್ನೂ ಮತ್ತು ಸೇನಾಪತಿಗಳನ್ನೂ ನೇಮಿಸುತ್ತಿದ್ದಿತು.

ಪ್ರಾಚೀನ ಭಾರತದ ರಾಜ್ಯಪದ್ಧತಿಯ ಇತಿಹಾಸದಲ್ಲಿ ಗಣರಾಜ್ಯಗಳು ಪ್ರಮುಖ ಪಾತ್ರವಹಿಸಿ ಉತ್ತಮ ಆಡಳಿತಕ್ಕೆ ತಳಹದಿ ಹಾಕಿವೆ. ಕೆಲವು ಗಣರಾಜ್ಯಗಳು ವಿಸ್ತಾರವಾಗಿಯೂ, ಸಂಪದ್ಯುಕ್ತವಾಗಿಯೂ ಇದ್ದು ಉತ್ತಮ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ಕೆಲವು ಗಣರಾಜ್ಯಗಳಲ್ಲಿ ಮಹಾವೀರ ಮತ್ತು ಗೌತಮರಂಥವ ವ್ಯಕ್ತಿಗಳು ಜನಿಸಿ ತಮ್ಮ ಕಾರ್ಯಸಾಧನೆಯಿಂದ ಮಹಾಪುರುಷರೆಂದೆನಿಸಿರುವರು.

ಕ್ರಿ. ಪೂ. ೪ ನೆ ಶತಮಾನದ ನಂತರ

ಕ್ರಿ. ಪೂ. ೪ ನೆ ಶತಮಾನದ ನಂತರ ಕೌಟಿಲ್ಯನ ರಾಜ್ಯತತ್ವಗಳ ಪ್ರತಿಪಾದನೆಯ ಪ್ರಭಾವದಿಂದಾಗಿ ರಾಜ್ಯ ಪದ್ಧತಿಗಳು

ಹೊಸ ಹೊಸ ರೂಪಗಳನ್ನು ತಾಳಿದವು. ಕೌಟಿಲ್ಯನು ಮೌರ್ಯ ಸಾಮ್ರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಚಂದ್ರಗುಪ್ತನಿಗೆ ನೆರವಾಗಿ ಒಬ್ಬ ಮಹಾ ರಾಜತಂತ್ರಜ್ಞನೆಂದು ಹೆಸರು ಪಡೆದಿದ್ದಾನೆ. ರಾಜ್ಯ ಶಾಸ್ತ್ರದಲ್ಲಿ ಈತನದೇ ಒಂದು ವಿಶಿಷ್ಟ ದೃಷ್ಟಿ:—ಐಕಮತ್ಯವಿಲ್ಲದ ಬಲಹೀನವಾದ ಸಣ್ಣ ಸಣ್ಣ ರಾಜ್ಯಗಳನ್ನೂ, ಗಣರಾಜ್ಯಗಳನ್ನೂ ಒಟ್ಟುಗೂಡಿಸಿ ಒಬ್ಬ ಬಲಿಷ್ಠ ಅರಸನ ಅಧಿಕಾರಕ್ಕೆ ಒಳಪಡಿಸಿ, ದೇಶದಲ್ಲಿ ರಾಷ್ಟ್ರೀಯ ಮನೋಭಾವ ಬೆಳೆಸಲು ಕೌಟಿಲ್ಯನ ಸಾಹಸದಿಂದ ಸಾಧ್ಯವಾಯಿತು.

ಮೌರ್ಯ ಸಾಮ್ರಾಜ್ಯ ಸ್ಥಾಪನೆಯಾಗುವ ಹೊತ್ತಿಗೆ ರಾಷ್ಟ್ರವು ಸಂಪೂರ್ಣ ಬದಲಾವಣೆ ಹೊಂದಿತು. ಆಡಳಿತ ಕ್ರಮವೇ ಮಾರ್ಪಾಟಾಯಿತು. ಅಸಂಖ್ಯಾತ ಸೈನ್ಯಬಲ ಮತ್ತು ತೊಡಕಿನ ರೀತಿಯಲ್ಲಿ ರಚಿಸಿದ ಅಧಿಕಾರ ಸತ್ತೆ ಪ್ರಾರಂಭವಾಯಿತು. ಪ್ರಮುಖ ವ್ಯಕ್ತಿಗಳು ಮತ್ತು ಪಂಗಡ ಮುಖಂಡರು ಅಧಿಕಾರಿಗಳಾಗಿ ನೇಮಿಸಲ್ಪಟ್ಟರು. ರಾಜನು ಶಾಸನಗಳನ್ನು ಜಾರಿಗೆ ತರುವದರ ಜೊತೆಗೆ ಶಾಸನಗಳನ್ನು ಸ್ವತಃ ತಾನೇ ನಿಯೋಜಿಸುವಂತಾದನು; ಅಧಿಕಾರವನ್ನುಪಯೋಗಿಸುವುದು ಮತ್ತು ಆಡಳಿತ ನಡೆಸುವುದರಲ್ಲಿ ಅತ್ಯಂತ ಪ್ರಧಾನ ಪಾತ್ರವಹಿಸುವವನಾದನು. ಕ್ರಮವಾಗಿ ಮಂತ್ರಿ ಪರಿಷತ್ತಿನ ವ್ಯವಸ್ಥೆಯಾಯಿತು. ಮಂತ್ರಿ ಪರಿಷತ್ತು ತನ್ನ ವಿವೇಕ ಧೈರ್ಯಗಳಿಂದ ಕೂಡಿದ ಸಮಾಲೋಚನೆಗಳಿಂದ ರಾಜ್ಯಕ್ಕೆ ಬಲ ಒದಗಿಸಿತು. ರಾಜ್ಯದ ಚಟುವಟಿಕೆಗಳು ಸಾಮಾಜಿಕ ಕ್ಷೇತ್ರದಲ್ಲೆಲ್ಲಾ ಹಬ್ಬಿದವು. ಐಹಿಕ, ಆಧ್ಯಾತ್ಮಿಕ

ಮತ್ತು ಕಲಾತ್ಮಕ ಕಾರ್ಯಗಳಿಗೆ ಅನುಕೂಲವಾಯಿತು. ರಾಜ್ಯದ ನ್ಯಾಯಾಂಗ ಕರ್ತವ್ಯಗಳು ಪ್ರತ್ಯೇಕವಾಗಿ ರೂಪುಗೊಂಡವು. ರಾಜ್ಯದ ನಾನಾ ಭಾಗಗಳಲ್ಲಿ ಒಬ್ಬ ಅಧಿಕಾರಿಯ ಮೇಲೆ ಮತ್ತೊಬ್ಬ ಅಧಿಕಾರಿಯಿರುವಂತೆ ಕ್ರಮಬದ್ಧವಾದ ಅಧಿಕಾರಿಗಳ ನೇಮಕವಾಯಿತು (Hierarchy of officers). ಭದ್ರತೆಯಿಂದ ಕೂಡಿದ ವಿಶಾಲ ಸಾಮ್ರಾಜ್ಯಗಳು ಸ್ಥಾಪನೆಯಾದವು—ಮೌರ್ಯ, ಕುಶಾಣ, ಕ್ಷತ್ರಪ, ಗುಪ್ತ ಮತ್ತು ವರ್ಧನ ಪ್ರಜೆಗಳು ಅರಸನನ್ನು ಪವಿತ್ರತೆಯಿಂದ ಕಂಡು ಪೂಜಿಸುವನ್ನು ಮುಂದೆ ಹೋದರು. ಪ್ರಾರಂಭದಲ್ಲಿ ರಾಜನು ಹೊಂದಿದ್ದ ಅಲ್ಪ ಪ್ರಮಾಣದ ಬಿರುದುಗಳು ಅನಂತರ ಅಧಿರಾಜ, ರಾಜಾಧಿರಾಜ, ಸಮ್ರಾಟ, ವಿರಾಟ್, ಏಕರಾಟ್, ಸಾರ್ವಭೌಮ, ಮಹಾ ರಾಜಾಧಿರಾಜ ಮುಂತಾಗಿ ಘನತೆ ಗೌರವವನ್ನು ಪಡೆದವು.

ವಿಶಾಲ ಸಾಮ್ರಾಜ್ಯಗಳಲ್ಲಿ ಅರಸನ ಸ್ಥಾನ ಎಷ್ಟೇ ಪ್ರಧಾನವಾಗಿದ್ದರೂ ಕೆಲವು ಅರಸರು ರಾಜ್ಯಾಂಗದ ಪರಸ್ಪರ ವ್ಯವಹಾರಗಳಲ್ಲಿ ಕೆಲವು ನೀತಿ ನಿಯಮಗಳನ್ನು ಅನುಸರಿಸಿದ್ದರು. ಅಶೋಕನ ಕಾಲದಲ್ಲಿ ಧರ್ಮ ಮಹಾಮಾತ್ರರೆಂಬವರು ಮತ್ತು ಗುಪ್ತರ ಕಾಲದಲ್ಲಿ ವಿನಯ ಸ್ಥಿತಿ ಸ್ಥಾಪಕರೆಂಬವರು ಪ್ರಜೆಗಳು ಧರ್ಮನಿರತರಾಗಿರುವಂತೆ ಮೇಲ್ವಿಚಾರಣೆ ಮಾಡುತ್ತಿದ್ದರು. ಸಾಮ್ರಾಜ್ಯದ ಆದರ್ಶಗಳು ಪ್ರಾರಂಭದಿಂದ ಏಕರೀತಿಯಲ್ಲಿದ್ದರೂ ಚಕ್ರವರ್ತಿಯು ವಿವೇಚನೆ, ಸಾಮರ್ಥ್ಯ, ಬುದ್ಧಿಶಕ್ತಿ, ಧೈರ್ಯದಿಂದ ರಾಜ್ಯದಲ್ಲಿ ಮತ್ತು ಇತರ ಭಾಗಗಳಲ್ಲಿ ತನ್ನ ಪ್ರಾಬಲ್ಯದ

ವರ್ಚಸ್ಸನ್ನು ಹೊರಳಿಸಿ ಬೇರೆ ಬೇರೆ ಕ್ಷೇತ್ರಗಳನ್ನು ತನ್ನ ಕೈಯಲ್ಲಿಟ್ಟುಕೊಂಡು ರಾಜ್ಯಗಳ ಬಲವನ್ನು ತೂಗಿ ಸಮಾನತೆಯನ್ನುಂಟು ಮಾಡಿದನು.

ಪ್ರಾಚೀನ ಭಾರತದ ರಾಜ್ಯಪದ್ಧತಿಯು ಬೆಳವಣಿಗೆಯು ಆರ್ಯರು ಆಚರಣೆಗೆ ತಂದಿದ್ದ ರಾಜ್ಯಪದ್ಧತಿಗಳಿಂದ ವೃದ್ಧಿ ಹೊಂದಿ ವಿಶಾಲ ಸಾಮ್ರಾಜ್ಯಗಳು ಸ್ಥಾಪನೆಯಾದ ಕಾಲದಲ್ಲಿ ಬಲ ಹೊಂದುತ್ತ ಬಂದು ಕೆಲವು ಕ್ಷೇತ್ರದಲ್ಲಾದರೂ ಶಾಶ್ವತವಾಗಿ ಇಂದಿನವರೆಗೂ ತಮ್ಮ ವರ್ಚಸ್ಸನ್ನು ಸ್ಥಾಪಿಸಿವೆ.

ರಾಷ್ಟ್ರದ ಸಪ್ತಾಂಗಗಳು

ಮನು ಮತ್ತು ಕೌಟಿಲ್ಯರ ಪ್ರಕಾರ ರಾಷ್ಟ್ರಕ್ಕೆ ಇರಲೇಬೇಕಾದ ಅಂಗಗಳಿಗೆ ಸಪ್ತಾಂಗಗಳೆಂದು ಹೆಸರು. ಈ ಸಪ್ತಾಂಗಗಳು ಯಾವುವೆಂದರೆ–ಸ್ವಾಮಿ, ಮಂತ್ರಿ, ಜನಪದ, ದುರ್ಗ, ಕೋಶ, ಸೈನ್ಯ ಮತ್ತು ಮಿತ್ರ. ಮನುಷ್ಯನ ದೇಹಕ್ಕೆ ಅವಯವಗಳು ಹೇಗೆ ಮುಖ್ಯವೋ ಹಾಗೆಯೇ ರಾಷ್ಟ್ರದ ಸಪ್ತಾಂಗಗಳು ಒಂದಕ್ಕೊಂದು ಪರಸ್ಪರ ಪೋಷಕವಾಗಿದ್ದು ಅವುಗಳ ಸಹಕಾರ ಮತ್ತು ದಕ್ಷತೆಯೇ ರಾಷ್ಟ್ರದ ಏಳಿಗೆಗೆ ಕಾರಣೀಭೂತವಾಗಿತ್ತು.

ರಾಜ್ಯದ ಸುವ್ಯವಸ್ಥೆ ಶಕ್ತಿಯ ಸಂವರ್ಧನೆ ಇವುಗಳಿಗೆ ಅನುಕೂಲವಾಗಿರುವಂತೆ ಪ್ರಾಚೀನ ಕಾಲದಲ್ಲಿ ನಿರ್ಮಾಣವಾದ ಸಪ್ತಾಂಗದ ಯೋಜನೆ ಒಂದಿಲ್ಲೊಂದು ವಿಧದಲ್ಲಿ ಆಧುನಿಕ ರಾಜ್ಯಗಳ ಆಡಳಿತದಲ್ಲಿಯೂ ಕಂಡುಬರುತ್ತದೆಂದು ಗುರುತಿಸಬಹುದು. ಪಾಶ್ಚಾತ್ಯ ಶಾಸ್ತ್ರಜ್ಞರು, ಮೇಲೆ ಹೇಳಿದಂತೆ,

ರಾಷ್ಟ್ರಕ್ಕಿರಬೇಕಾದ ನಾಲ್ಕು ಅಂಗಗಳಲ್ಲಿ ಜನಸಮುದಾಯವನ್ನು ಒಂದಾಗಿ ಹೇಳುತ್ತಾರೆ; ಆಧುನಿಕ ರಾಷ್ಟ್ರದ ಅಂಗಗಳಲ್ಲೊಂದಾದ ಜನಸಮುದಾಯುವನ್ನು ಜನಪದ ಎಂಬ ರಾಜ್ಯಾಂಗವು ಪ್ರತಿನಿಧಿಸುತ್ತದೆ.

ಪ್ರಜಾಪ್ರಭುತ್ವದ ಮೂಲ ತತ್ತ್ವವೆನಿಸಿರುವ–ಜನತೆಗೆ ಮತ್ತು ಶಾಸ್ತ್ರಗಳಿಗೆ ಶಸ್ತ್ರವು ಅಧೀನವಾಗಿರಬೇಕು. ವಿಪರೀತವಾದರೆ ನಿರಂಕುಶ ಪ್ರಭುತ್ವವಾಗುವುದು–ಎಂಬುದನ್ನು ಪ್ರಾಚೀನ ಭಾರತದ ರಾಜ್ಯಶಾಸ್ತ್ರ ಪ್ರಣೇತರು ಸ್ಪಷ್ಟವಾಗಿ ತಿಳಿಸಿದ್ದಾರೆ. ಪ್ರಾಚೀನ ಭಾರತದ ಇತಿಹಾಸವನ್ನು ಅವಲೋಕಿಸಿದರೆ, ರಾಜ್ಯ ಸಾಮ್ರಾಜ್ಯಗಳು ಸ್ಥಾಪನೆಯಾಗುವ ಪೂರ್ವದಲ್ಲಿ ಅರಾಜಕತೆಯು ಗೊಂದಲ ಸ್ಥಿತಿ ಉಂಟಾಗಿತ್ತೆಂದೂ. ಈ ಪರಿಸ್ಥಿತಿಯನ್ನು ನಿವಾರಿಸಲು ಧರ್ಮ, ಸತ್ಯ, ಶಾಂತಿ ಮತ್ತು ನ್ಯಾಯವನ್ನು ಪ್ರಸ್ಥಾಪಿಸುವ ರಾಜ್ಯ ಸಾಮ್ರಾಜ್ಯಗಳು ಉದಯವಾದವೆಂಬ ಸಂಗತಿ ಗೋಚರವಾಗುತ್ತದೆ.

ಪ್ರಾಚೀನ ಭಾರತದ ರಾಜ್ಯಶಾಸ್ತ್ರ ಪ್ರಣೇತರರು ಹೇಳಿರುವ ಸಪ್ತಾಂಗಗಳ ವಿಚಾರವಾಗಿ ಸ್ವಲ್ಪಮಟ್ಟಿಗೆ ವಿವೇಚಿಸೋಣ–ಇವರಲ್ಲಿ ಕೌಟಿಲ್ಯನು ಅಗ್ರಗಣ್ಯನೆಂದು ಹೇಳಬಹುದು.

ಸ್ವಾಮಿ:

ಕೌಟಿಲ್ಯನು ವರ್ಣಿಸುವ ರಾಜ್ಯವು ಅರಸ ಪ್ರಧಾನವಾದುದು. ಅರಸೊತ್ತಿಗೆಯೇ ಪ್ರಾಚೀನ ಭಾರತದ ಪ್ರಮುಖ ಆಡಳಿತ ವ್ಯವಸ್ಥೆ. ರಾಜ್ಯದ ಹೊಣೆಗಾರಿಕೆಯನ್ನು ಹೊತ್ತಿರುವ ಅರಸನಿಗೆ ಇರಬೇಕಾದ ಅರ್ಹತೆಗಳು ಗ್ರಂಥಗಳಲ್ಲಿ

ವಿಶದವಾಗಿ ದೊರೆಯುತ್ತವೆ. ಅರಸನು ಹೊಂದಿರಬೇಕಾದ ಶಾಸ್ತ್ರಜ್ಞಾನ ಮತ್ತು ಗುಣಗಳ ವಿಚಾರವಾಗಿ ಪ್ರಸ್ತುತ ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ಕಾಣಿಸಲಾಗಿದೆ. ಮಂತ್ರಶಕ್ತಿ, ಉತ್ಸಾಹಶಕ್ತಿ ಮತ್ತು ಪ್ರಭುಶಕ್ತಿಗಳನ್ನು ಅವನು ಪಡೆದಿರಬೇಕು. (ಸಚಿವರಲ್ಲಿ ಸಮಾಲೋಚನೆ ಮಾಡುವ ಶಕ್ತಿ, ಅದನ್ನು ಗೋಪ್ಯದಲ್ಲಿಟ್ಟುಕೊಳ್ಳುವ ಶಕ್ತಿ, ಪರಾಕ್ರಮ). ಅನ್ವೀಕ್ಷಿತಿ (ಸಾಂಖ್ಯ, ಯೋಗ, ಲೋಕಾಯತ), ತ್ರಯೀ (೩ ವೇದಗಳು) ವಾರ್ತಾ ಮತ್ತು ದಂಡನೀತಿ ಇವನ್ನು ಅಭ್ಯಸಿಸಿರಬೇಕು. ತರ್ಕಶಾಸ್ತ್ರ, ಆತ್ಮವಿದ್ಯೆ (Metaphysics), ಮತ್ತು ೬ ಅಂಗಗಳ (ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ) ಜ್ಞಾನವನ್ನು ಪಡೆದಿರಬೇಕು. ರೂಪ (Currency), ಗಣನ (Accountancy), ಪುರಾಣ, ಇತಿಹಾಸ, ನ್ಯಾಯ ಶಾಸ್ತ್ರ, ಗಂಧರ್ವವೇದ (Music) ಇತ್ಯಾದಿ ಶಾಸ್ತ್ರಗಳಲ್ಲಿ ತಿಳು ವಳಿಕೆ ಪಡೆದಿರಬೇಕು.

ದಕ್ಷತೆಯಿಂದ ಕ್ರಮವರಿತು ಕೆಲಸ ಮಾಡುವುದು, ವಯೋವೃದ್ಧರೂ, ಜ್ಞಾನವೃದ್ಧರೂ ಆದವರ ಸಂಗಡ ಸಲಹೆ ಪಡೆಯುವುದು, ಕಾರ್ಯಾಂಗ ಶಾಸನಾಂಗ ಹಾಗೂ ನ್ಯಾಯಾಂಗ ಗಳ ಕಾರ್ಯಭಾರವನ್ನು ನಡೆಸುವುದು, ಪ್ರಜೆಗಳ ಕಲ್ಯಾಣ ವನ್ನೇ ತನ್ನ ಧ್ಯೇಯವನ್ನಾಗಿರಿಸಿಕೊಂಡು ಶ್ರಮಿಸುವುದು, ಪ್ರಜೆಗಳ ಕಷ್ಟಸುಖಗಳನ್ನು ಸ್ವತಃ ಕೇಳುವುದು ಮತ್ತು ಬಗೆ ಹರಿಸುವುದು, ಎಲ್ಲರಿಗೂ ನ್ಯಾಯ ಸಮವಾಗಿ ದೊರೆಯುವಂತೆ ವ್ಯವಸ್ಥೆ ಮಾಡುವುದು ಮುಂತಾದ ಕರ್ತವ್ಯನಿರ್ವಹಣೆಗೆ

ಅವಶ್ಯವಾಗಿ ಬೇಕಾದ ಸಾಮರ್ಥ್ಯ, ಧೈರ್ಯ ಮೊದಲಾದ ಗುಣಗಳನ್ನು ಹೊಂದಿರಬೇಕು.

ವೇದಗಳ ಕಾಲದಲ್ಲಿ ರಾಜನು ಯುದ್ಧ ಪರಿಸ್ಥಿತಿಯನ್ನು ಕೊನೆಗಾಣಿಸಿ ಶಾಂತಿಸ್ಥಾಪನೆ ಮಾಡಲು ಮಾತ್ರ ಆಯ್ಕೆಯಾಗುತ್ತಿದ್ದನು. ದಾನವ-ದೇವತೆಗಳಿಗೆ ಯುದ್ಧ ತಲೆದೋರಿದಾಗ ಮುಖಂಡ ಅಥವಾ ರಾಜನು ಅಗತ್ಯವೆನಿಸಿದನು. ರಾಜನು ಸೈನ್ಯಾಧಿಪತ್ಯ ವಹಿಸಿಕೊಂಡು ಸೈನ್ಯಕ್ಕೆ ಸ್ಫೂರ್ತಿ ನೀಡಿದಾಗಲೇ ಗೆಲವುಂಟಾಗುತ್ತಿತ್ತು. ಯುದ್ಧಕಾಲದಲ್ಲಿ ಜಯ ಸಂಪಾದಿಸಿ ರಾಜ್ಯರಕ್ಷಣೆ ಮಾಡಿದವನು ಶಾಂತ ಪರಿಸ್ಥಿತಿಯುಂಟಾದಾಗ ಅರಸನೆಂದು ಅಂಗೀಕರಿಸಲ್ಪಡುತ್ತಿದ್ದನು. ಆರ್ಯರಲ್ಲಿ ಆಚರಣೆಯಲ್ಲಿದ್ದ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯು ಅರಸೊತ್ತಿಗೆಗೆ ಸಹಕಾರವಿತ್ತು. ಪ್ರಜೆಗಳಲ್ಲೆಲ್ಲಾ ವಿಶ್ವಾಸವನ್ನುಂಟುಮಾಡಿತ್ತು. ಕೆಲವು ವೇಳೆ ರಾಜನು ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದರೂ ದೇಶದ ರಕ್ಷಣೆ ಮತ್ತು ಶಾಂತಿ ಸ್ಥಾಪನೆಗಾಗಿ ಶ್ರಮಿಸುತ್ತಿದ್ದನು.

ಕಾಲಕ್ರಮೇಣ ಅರಸನನ್ನು ಆರಿಸುವ ಪದ್ಧತಿಗೆ ಬದಲಾಗಿ ಅರಸೊತ್ತಿಗೆ ಅವನಿಗೆ ವಂಶಪರಂಪರಾಗತವಾಗಿ ಬಂದ ಹಕ್ಕೆಂಬ ಪದ್ಧತಿ ಬೆಳೆಯಿತು.

ಅರಸನ ಪಟ್ಟಬಂಧೋತ್ಸವ

ಅರಸನು ಪಟ್ಟಕ್ಕೆ ಬಂದ ಕಾಲಕ್ಕೆ ನೆರವೇರಿಸುತ್ತಿದ್ದ ಪಟ್ಟಬಂಧೋತ್ಸವಕ್ಕೆ ಮಹತ್ವದ ಸ್ಥಾನವಿತ್ತು. ರಾಜಸೂಯ ಕಾಲದಲ್ಲಿ ಕುಮಾರನು ತನ್ನ ಸೈನ್ಯ ಸಾಮರ್ಥ್ಯವನ್ನೂ

ಕುಶಲತೆಯನ್ನೂ ಪ್ರದರ್ಶಿಸಬೇಕಾಗಿತ್ತು. ಹಿರಿಯ ಮಗನು ಪಟ್ಟಕ್ಕೆ ಬರುವ ರೂಢಿ ಬೆಳೆಯಿತು . ಕೆಲವು ಪ್ರಸಂಗಗಳಲ್ಲಿ ಪಟ್ಟಕ್ಕೆ ಬರುವವನನ್ನು ನಾಮಕರಣ ಮಾಡುವುದೂ ರೂಢಿಯಲ್ಲಿತ್ತು. ಸಮುದ್ರಗುಪ್ತನನ್ನು ತನ್ನ ತರುವಾಯ ರಾಜನಾಗಬೇಕೆಂದು ೧ ನೆಯ ಚಂದ್ರಗುಪ್ತನು ನಾಮಕರಣ ಮಾಡಿದನು. ಕುಮಾರನ ಶಿಕ್ಷಣಕ್ಕೆ ಮಹತ್ವದ ಸ್ಥಾನ ಕೊಟ್ಟಿದ್ದರು. ಶಿಕ್ಷಣ ಮುಗಿದ ನಂತರವೇ ಕುಮಾರನನ್ನು ಪಟ್ಟಕ್ಕೆ ತರುವ ಪದ್ಧತಿಯಿತ್ತು. ರಾಜಸೂಯ ಅಥವಾ ಪಟ್ಟಬಂಧೋತ್ಸವದೊಡನೆ ಕುಮಾರನು ಪಟ್ಟಕ್ಕೆ ಬರುವ ಕಾರ್ಯ ಪೂರ್ಣವಾಗುತ್ತಿತ್ತು. ಈ ಉತ್ಸವದಲ್ಲಿ ಮೂರು ಕಾರ್ಯ ಕಲಾಪಗಳಿದ್ದವು. ಮೊದಲನೆಯದು ಕುಮಾರನು ' ರತ್ನಿ ' [ಸಚಿವರು] ಎಂಬ ಪ್ರಮುಖರಿಗೆ ಗೌರವ ಸಲ್ಲಿಸಿ, ಆಡಳಿತ ವರ್ಗದವರ ಮಾನ್ಯತೆ ಸಂಪಾದಿಸುವುದು, ಎರಡನೆಯದು ಕುಮಾರನು ಹುಲಿಚರ್ಮದ ಮೇಲೆ ಕುಳಿತುಕೊಂಡು ಪವಿತ್ರ ನೀರಿನಿಂದ ಮಂತ್ರೋಚ್ಚಾರಣೆಯೊಡನೆ ಸವಿತೃ, ಬೃಹಸ್ಪತಿ, ಮಿತ್ರ, ಇಂದ್ರ, ವರುಣರು ತಮಗೆ ಶಕ್ತಿ ಸಾಮರ್ಥ್ಯಗಳನ್ನೂ, ವಾಕ್ಪಟುತ್ವವನ್ನೂ, ಸತ್ಯ ಮತ್ತು ಶಾಸನಗಳಿಗೆ ವಿಧೇಯತೆಯನ್ನೂ ಕೊಡಲೆಂದು ಪ್ರಾರ್ಥನೆ ಮಾಡಿಕೊಂಡು ಅಭಿಷೇಕ ಮಾಡಿಸಿಕೊಳ್ಳುವುದು; ಈ ಕಲಾಪಗಳಲ್ಲಿ ಅತಿ ಮುಖ್ಯ ಕಾರ್ಯವೆಂದರೆ ಕುಮಾರನು ಧರ್ಮವನ್ನು ಅತಿಕ್ರಮಿಸದೆ ಶಾಸನಗಳನ್ನು ಪಾಲಿಸುವೆನೆಂಬ ಪ್ರತಿಜ್ಞೆ ತೆಗೆದುಕೊಳ್ಳುವುದು; ನಂತರ ಮೂರನೆಯದು ಪಟ್ಟಾಭಿಷೇಕವಾದ ನಂತರ ಮನರಂಜನ ಕಾರ್ಯಗಳಲ್ಲಿ ಭಾಗವಹಿಸುವುದು.

ಪಟ್ಟಬಂಧೋತ್ಸವದ ನಂತರ ಕುಮಾರನು ತನ್ನ ಜೀವನದಲ್ಲಿ ಅತ್ಯಂತ ಕಠಿಣ ಕಾಲವೆನಿಸಿದ ರಾಜ್ಯಾಡಳಿತದಲ್ಲಿ ಭಾಗವಹಿಸಬೇಕಾಗಿತ್ತು. ರಾಜ್ಯ ಪದ್ಧತಿಗಳು ಉದಯಿಸಿದ ಪುರಾತನ ಕಾಲದಿಂದಲೂ ಕುಮಾರನಿಗೆ ಮಹತ್ವದ ಸ್ಥಾನವಿತ್ತು: ಈತನು ರಾಜನ್ಯರಲ್ಲಿ ಪ್ರಪ್ರಥಮನು.

ಅರಸನ ದಿನಚರಿ

ರಾಜ್ಯದಲ್ಲಿ ಅರಸನ ಸ್ಥಾನವು ಸುಖದ ಸುಪ್ಪತ್ತಿಗೆಯಾಗಿರಲಿಲ್ಲ. ಕೌಟಿಲ್ಯನು. ರಾಜನು ಪಾಲಿಸಬೇಕಾಗಿದ್ದ ಉಗ್ರವಾದ ದಿನಚರಿಯನ್ನೇ ಹೇಳಿರುವನು. ಅರಸನ ದಿನಚರಿಯಲ್ಲಿ ದಿನವನ್ನು ೮ ಭಾಗಗಳನ್ನಾಗಿ ವಿಂಗಡಿಸಿ ಆ ಕಾಲಗಳಲ್ಲಿ ಆತನು ಮುಖ್ಯ ವಿಚಾರಗಳೆನಿಸಿದ ಆದಾಯ, ವೆಚ್ಚ, ಪ್ರಜೆಗಳ ಆಗುಹೋಗುಗಳು, ಸೈನಿಕ ಮತ್ತು ನ್ಯಾಯಾಸ್ಥಾನಗಳ ಪರಿಶೀಲನೆ ನಡೆಸಬೇಕಾಗಿತ್ತು. ಲಕ್ಷಾಂತರ ಪ್ರಜೆಗಳ ಮೇಲೆ ತನ್ನ ಅಧಿಕಾರವನ್ನಿಟ್ಟಿದ್ದರೂ ಅವರ ಕಷ್ಟಸುಖಗಳು ತನ್ನ ಕಷ್ಟಸುಖಗಳೆಂದು ಪರಿಗಣಿಸುತ್ತಿದ್ದನು. ಪ್ರಜೆಗಳಿಗೆ ತಂದೆಯಂತೆ, ನ್ಯಾಯಪಾಲಕನಂತೆ, ಸೈನಿಕಮುಖಂಡನಂತೆ ಮತ್ತು ವ್ಯಾಜ್ಯಗಳುಂಟಾದಾಗ ತೀರ್ಪನ್ನು ಕೊಡುವ ಮಧ್ಯಸ್ಥನಂತೆ ವರ್ತಿಸಬೇಕಾಗುತ್ತಿತ್ತು.

ಅರಸನು ದೈವಾಂಶಸಂಭೂತನೆ ?

ಅರಸನು ದೈವಾಂಶಸಂಭೂತನೆಂಬ ಭಾವನೆ ವೇದಗಳ ಕಾಲದಲ್ಲಿ ಸ್ಪಷ್ಟವಾಗಿ ಮೂಡಿರಲಿಲ್ಲ. ಕಾಲಕ್ರಮೇಣ ಅರಸನು ತನ್ನ ಅಸಾಧಾರಣ ಧೈರ್ಯ ಪರಾಕ್ರಮಗಳಿಂದ

ಜನತೆಗೆ ಒದಗಿದ ವಿಪತ್ತುಗಳನ್ನು ದೂರಮಾಡಲು ಸಮರ್ಥ ನಾದುದರಿಂದ ಆದರ ಭಾವನೆ ಬೆಳೆದು ಆತನ ವಿಷಯದಲ್ಲಿ ಜನತೆಯಲ್ಲಿ ಆತನು ದೇವಾಂಶನೆಂಬ ಕಲ್ಪನೆ ಉದಯ ವಾಗಿರಬೇಕು.

ಸ್ಮೃತಿ ಮತ್ತು ಪುರಾಣಗಳೂ ಅರಸನು ದೈವಾಂಶ ಸ್ವರೂಪನೆಂಬ ಅಂಶವನ್ನು ಅಂಗೀಕರಿಸುತ್ತವೆ. 'ನಾ ವಿಷ್ಣುಃ ಪೃಥುವೀ ಪತಿಃ' ಎಂಬ ನಾಣ್ಣುಡಿ ಪ್ರಚಾರದಲ್ಲಿತ್ತು. ಆದರೆ ಇಂಥ ನಂಬಿಕೆಯಿದ್ದ ಮಾತ್ರಕ್ಕೆ ಪ್ರಾಚೀನ ಭಾರತದ ಅರಸನಿಗೆ, ಯುರೋಪಿನ ಮಧ್ಯಯುಗದಲ್ಲಿ ಕಂಡು ಬರು ವಂತೆ, ಸಿಂಹಾಸನದ ಹಕ್ಕು ದೈವದತ್ತವಾದುದೆಂಬ (Divine Right) ಸ್ವೇಚ್ಛಾಪ್ರವೃತ್ತಿಯ ನಡೆವಳಿಕೆ ಧರ್ಮ ಶಾಸ್ತ್ರಗಳಿಗೆ ವಿರುದ್ಧವೆನಿಸಿತ್ತು. ಏಕೆಂದರೆ, ಉತ್ಕೃಷ್ಟ ಆದರ್ಶಗಳನ್ನು ಪಾಲಿಸಿ ಜನಾದರಣೀಯವಾಗಿ ಆಡಳಿತ ನಡೆ ಸಿದ ಅನೇಕ ರಾಜರುಗಳು, ಧರ್ಮಶಾಸ್ತ್ರಜ್ಞರಿಂದ ಮತ್ತು ಪಂಡಿತರಿಂದ ಸೂಕ್ತವೆಂದು ನಿರ್ಧರಿಸಲ್ಪಡುತ್ತಿದ್ದ ಶಾಸನ ಗಳನ್ನು ಪ್ರಥಮತಃ ತಾವೇ ಪಾಲಿಸಿ ಪ್ರಜೆಗಳಿಗೆ ಮಾರ್ಗದರ್ಶಿ ಗಳಾಗಿದ್ದರು.

ಅರಸನ ಸ್ಥಾನ

೧. ಅರಸನು ರಾಜ್ಯದಲ್ಲಿ ರೂಢಿಯಲ್ಲಿರುವ ಶಾಸನ ಗಳನ್ನು ಮತ್ತು ಸಮಾಜದ ನೈತಿಕ ಜೀವನವನ್ನು ರಕ್ಷಿಸುವವನು.

ವೇದಗಳ ಕಾಲದಿಂದಲೂ ಅರಸನು ಶಾಸನಗಳ ಪಾಲನೆ ಮತ್ತು ರಕ್ಷಣೆ ಮಾಡುವವನು. ಅರಸನು ಧೃತಾವರ್ತನಾಗಿರ

ಬೇಕು: ವರುಣನಂತೆ ಧರ್ಮ ಮತ್ತು ಶಾಸನಗಳಿಗೆ ಬದ್ಧನಾಗಿರಬೇಕು. ಅರಸನಿಗಿಂತಲೂ ಹೆಚ್ಚಾಗಿ ಶಾಸನಗಳು ಮತ್ತಷ್ಟು ಅಧಿಕ ಪ್ರಮಾಣದಲ್ಲಿ ದೈವಾಂಶ ಸಂಭೂತವೆಂಬ ನಂಬಿಕೆಯಿತ್ತು. ಅದ್ದರಿಂದ ಅರಸನು ಧರ್ಮಕ್ಕೆ ಕಟ್ಟುಬಿದ್ದು ಎಲ್ಲಾ ಕಾಲದಲ್ಲಿಯೂ ಸನ್ಮಾರ್ಗಪ್ರವರ್ತಕನಾಗಿದ್ದು ಧರ್ಮವನ್ನು ಪಾಲಿಸಿ ರಕ್ಷಣೆ ಮಾಡತಕ್ಕದ್ದು. ಅರಸನು ಧರ್ಮನಿಷ್ಠನಾಗಿದ್ದರೆ ಆತನ ಪ್ರಜೆಗಳೂ ಕೂಡ ಅರಸನ ಮಾದರಿಯನ್ನೇ ಅನುಸರಿಸಿ ಧರ್ಮನಿರತರಾಗಿರುತ್ತಾರೆ: ಧರ್ಮಿಷ್ಠನಾಗಿ ಆಳ್ವಿಕೆ ನಡೆಸಿದ ಅರಸನ ಕಾಲವು ಸಂಕ್ಷಿಪ್ತವಾಗಿ ಏಳಿಗೆ ಹೊಂದುವುದೆಂಬ ದೃಢ ನಂಬಿಕೆಯಿತ್ತು.

೨. ಅರಸನು ಸಾರ್ವಜನಿಕ ಕ್ಷೇತ್ರದಲ್ಲಿ ಒಬ್ಬ ನೌಕರ.

ಧರ್ಮಸೂತ್ರಗಳ ಪ್ರಕಾರ ಅರಸನು ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಪ್ರಥಮ ನೌಕರನು. ಈತನು ಸಲ್ಲಿಸುವ ಸೇವೆಗೆ ಪ್ರತಿಯಾಗಿ ರಾಜ್ಯದಲ್ಲಿ ಶೇಖರವಾದ ಕರಗಳಲ್ಲಿ ಶೇ. ೧೬ ರಷ್ಟು ಅರಸನ ಪಾಲು. ಕೌಟಿಲ್ಯ ಮತ್ತು ನಾರದರು ಇದೇ ಅಭಿಪ್ರಾಯವನ್ನು ಸಮರ್ಥಿಸಿ ಹೇಳುತ್ತಾರೆ. ಅರಸನು ನಾಡಿನ ಮತ್ತು ಪ್ರಜೆಗಳ ರಕ್ಷಣೆ ಮಾಡುವವನೆಂತಲೇ ರಾಜ್ಯಾದಾಯದಲ್ಲಿ ಪಾಲು ತೆಗೆದುಕೊಳ್ಳುವುದಕ್ಕೆ ಅರ್ಹತೆ ಪಡೆಯುವನು. ಶುಕ್ರಾಚಾರ್ಯರು. ಅರಸನು ಪ್ರಜೆಗಳಿಗೆ ಅಧಿಪತಿಯಾಗಿಯೂ ಹಾಗೂ ಅವರ ಸೇವಕನಾಗಿಯೂ ಇರಬೇಕೆಂದು ಹೇಳಿದ್ದಾರೆ.

೩. ಅರಸನು ರಾಜ್ಯದ ಆಡಳಿತದ ವಿಶ್ವಸ್ಥ ಪ್ರತಿನಿಧಿ.

ಪ್ರಾಚೀನ ಭಾರತದಲ್ಲಿಯೂ ಆಧುನಿಕ ರೀತಿಯಂತೆ (ಪ್ರಜೆಗಳ ವಿಶ್ವಾಸಕ್ಕೆ ಅರ್ಹನಾಗಿ ಆ ಜನರ ರಾಜ್ಯ ಶಾಸನದ ಕಾರ್ಯಗಳ ನಿರ್ವಾಹಕನಾಗಿದ್ದನು. ಅರಸನು ರಾಜ್ಯದ ವಿಶ್ವಸ್ಥ ಪ್ರತಿನಿಧಿ (Trustee) ಎಂಬ ಭಾವನೆ ಇತ್ತು.) ರಾಜ್ಯದ ಕೋಶ ಮತ್ತು ಸಂಪತ್ತು ಅರಸನ ಸ್ವಂತ ಆಸ್ತಿಯಲ್ಲ; ಅವು ಸಾರ್ವಜನಿಕ ಕಾರ್ಯಗಳಿಗಾಗಿಯೂ, ರಾಷ್ಟ್ರ ನಿರ್ಮಾಣ ಕಾರ್ಯಕ್ಕಾಗಿಯೂ ವಿನಿಯೋಗವಾಗಬೇಕೆಂದು ನಿಯಮವಿತ್ತು. ಅರಸನು ರಾಜ್ಯದ ಹಣವನ್ನು ದುರುಪಯೋಗಪಡಿಸಿದರೆ ಅವನು ಒಬ್ಬ ಅಪರಾಧಿ, ಪಾಪಕಾರ್ಯ ಮಾಡಿದವನೆಂಬ ಭಾವನೆ ಇತ್ತು. ಆದ್ದರಿಂದ ಅರಸನು ತನ್ನ ಸುಖವನ್ನು ಬಯಸುವಂತೆಯೆ ಪ್ರಜೆಗಳ ಸುಖವನ್ನೂ ಬಯಸಿ ತನ್ನ ಕರ್ತವ್ಯಗಳನ್ನು ಪಾಲಿಸಲು ಶ್ರಮಿಸಬೇಕಾಗಿತ್ತು. ಕೆಲವು ರಾಜ್ಯ ಶಾಸ್ತ್ರಜ್ಞರ ಪ್ರಕಾರ ಅರಸನು ನಂಬಿಕೆಗೆ ಅರ್ಹನಾದ ಧರ್ಮದರ್ಶಿಗಿಂತ ಹೆಚ್ಚಿನ ಹೊಣೆಗಾರಿಕೆ ಹೊತ್ತಿರುವನು; ಧರ್ಮದರ್ಶಿಯು ಹಣವನ್ನು ಸ್ವಂತಕ್ಕೆ ಬಳಸದೇ ಸರಿಯಾಗಿ ಲೆಕ್ಕಪತ್ರಗಳನ್ನಿಟ್ಟರೆ ಸಾಕು; ಆದರೆ ಅರಸನು ರಾಜ್ಯದ ಆದಾಯವನ್ನು ದುರುಪಯೋಗಪಡಿಸದೆ ಗರ್ಭಿಣಿಸ್ತ್ರೀಯು ಹೇಗೆ ತನ್ನ ಶಿಶುವಿನ ಹಿತಚಿಂತನೆ ಮಾಡಿ ತನ್ನ ಸುಖವನ್ನು ತ್ಯಜಿಸುವಳೋ ಹಾಗೆ ರಾಜ್ಯದ ಪ್ರಜೆಗಳ ಹಿತಕ್ಕಾಗಿ ದುಡಿಯಬೇಕೆಂಬ ಅಭಿಪ್ರಾಯವಿತ್ತು. ಪ್ರಜಾರಕ್ಷಣೆ ಮತ್ತು ಧರ್ಮಪಾಲನೆಗಾಗಿ ಅರಸನು ಸ್ವಂತ ಸುಖ–

ವೊಂದನ್ನೇ ಬಯಸದೇ ಎಷ್ಟೋ ಕಷ್ಟಗಳು ಬಂದರೂ ಸಹನ ಮಾಡಿಕೊಂಡು ಕರ್ತವ್ಯ ಸಾಧಿಸುವ ಸಾಮರ್ಥ್ಯವನ್ನು ಹೊಂದಿರಬೇಕು.

೮. ಅರಸನ ಪ್ರಭುತ್ವವು ಸಾಂಕುಶ

ಪ್ರಾಚೀನ ಭಾರತದಲ್ಲಿ ಅತ್ಯುತ್ತಮ ಆದರ್ಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಡಳಿತ ನಡೆಸುವ ಅರಸರು ಯಾವ ವೇಳೆಯಲ್ಲಾಗಲಿ ಪ್ರಜಾರಕ್ಷಣೆ ಮತ್ತು ಕ್ಷೇಮಕ್ಕಾಗಿ ಶ್ರಮಿಸುತ್ತಿದ್ದರು; ಅಂಥವರ ಪ್ರಭುತ್ವ ಸಾಂಕುಶ ಪ್ರಭುತ್ವವಾಗಿತ್ತು. ಆದರೆ ಕೆಲವು ಸಂದರ್ಭಗಳಲ್ಲಿ ದುಷ್ಟ ಸ್ವಭಾವವುಳ್ಳ ರಾಜರು ಪಟ್ಟಕ್ಕೆ ಬಂದಾಗ ಅವರ ಪ್ರಭುತ್ವವು ನಿರಂಕುಶ ಪ್ರಭುತ್ವವಾಗುವ ಅವಕಾಶಗಳು ತಲೆದೋರುತ್ತಿದ್ದವು. ಇಂತಹ ಸಂದರ್ಭಗಳಲ್ಲಿ ಅರಸನ ಅಧಿಕಾರವನ್ನು ನಿಯಂತ್ರಣದಿಂದಿರಿಸಲು ಕೆಲವು ಅಂಕೆ ಅಥವಾ ಅಡ್ಡಿಗಳಿದ್ದವು. ವೇದಗಳ ಕಾಲದಲ್ಲಿ ಸಮಿತಿಯು ಅರಸನ ಪ್ರಭುತ್ವದ ಮೇಲೆ ನಿಯಂತ್ರಣವನ್ನಿಟ್ಟಿದ್ದಿತು. ತರುವಾಯ ಸಮಿತಿಯ ಪ್ರಾಬಲ್ಯ ಕಡಿಮೆಯಾದರೂ ಆಚರಣೆಯಲ್ಲಿದ್ದ ಧಾರ್ಮಿಕ ಮತ್ತು ಆಧ್ಯಾತ್ಮಿಕ ನಿಯಮಗಳೂ ಹಾಗೂ ಸಾಮಾಜಿಕ ಕಟ್ಟುಪಾಡುಗಳೂ ಅರಸನ ಅಧಿಕಾರ ಪ್ರಯೋಗದ ಮೇಲೆ ಬಹುಮಟ್ಟಿನ ನಿಯಂತ್ರಣವನ್ನಿರಿಸಿದ್ದವು. ಅರಸನು ಧರ್ಮಬಾಹಿರನಾಗದಂತೆ ಮತ್ತು ಕರ್ತವ್ಯಭ್ರಷ್ಟನಾಗದಂತೆ ಅವನಿಗೆ ಪ್ರಾರಂಭದಿಂದಲೇ (ಕುಮಾರನಿರುವಾಗಲೇ) ಶಿಕ್ಷಣ ಕೊಟ್ಟಿರುತ್ತಿದ್ದರು.

ಕ್ರಿ. ಪೂ. ೫೦೦ ರ ಮೊದಲು ಮತ್ತು ನಂತರ ಅರಸನ ಸ್ಥಾನ

ಅರಸನ ಸ್ಥಾನ ಮತ್ತು ಅಧಿಕಾರವು ಕಾಲಕಾಲಕ್ಕೆ ಬದಲಾವಣೆ ಹೊಂದಿದವು. ಅತ್ಯಂತ ಪುರಾತನ ಕಾಲದಲ್ಲಿ ಅರಸನು ಮಂತ್ರಿ ಪರಿಷತ್ತಿನ ಕಾರ್ಯಕಲಾಪಗಳ ಅಧ್ಯಕ್ಷನಾಗಿದ್ದನು. ಸಮಿತಿಯು ಸದಸ್ಯರಿಂದ ಆಯ್ಕೆಯಾಗುತ್ತಿದ್ದನು; ಅಧರ್ಮನಿರತನಾದರೆ ತಳ್ಳಿಹಾಕಲ್ಪಡುತ್ತಿದ್ದನು; ಮಹಾಕಾವ್ಯಗಳ ಕಾಲದ ಹೊತ್ತಿಗೆ ಅರಸನು ವೈಭವಯುತನಾಗಿ ಆಳ್ವಿಕೆ ನಡೆಸಿ ಆಡಳಿತದಲ್ಲಿ ಸಹಾಯ ಮಾಡಲು ಸೇನಾನಿ, ಗ್ರಾಮಣಿ, ಕ್ಷತ್ರಿ, ಸಂಗ್ರಹಿತ್ರ ಮತ್ತು ಸೂತ್ರರೆಂಬ ಅಧಿಕಾರಿಗಳನ್ನೂ ಸಹ ನೇಮಿಸುವಂತಾದನು. ಈ ರೀತಿಯಲ್ಲಿ, ಕ್ರಿ. ಪೂ. ೫೦೦ ರ ತರುವಾಯ ರಾಜ್ಯವು ವ್ಯಾಪ್ತಿಯಲ್ಲಿ ವಿಸ್ತಾರ ಹೊಂದಿದಂತೆ ಅರಸನ ಅಧಿಕಾರವೂ ಹೆಚ್ಚಿತು. ಶತ್ರುಗಳಿಂದ ರಕ್ಷಣೆ ಮಾಡಿಕೊಳ್ಳುವದಕ್ಕಾಗಿ ಅರಸನ ರಕ್ಷಣಾ ವ್ಯವಸ್ಥೆ ಹೆಚ್ಚಿತು. ಅರಸನು ದರ್ಬಾರಿನಲ್ಲಿ ಕೂಡುವುದು, ವಂದಿ ಮಾಗಧರಿಂದ ಹೊಗಳಿಸಿಕೊಳ್ಳುವುದು—ಇವೇ ಮೊದಲಾದ ಪ್ರಭುಶಕ್ತಿಯ (Sovereignty) ಸಂಕೇತವಾದ ಅಧಿಕಾರಗಳೆಲ್ಲವೂ ಹೆಚ್ಚಿದವು.

ಮಂತ್ರಿಪರಿಷತ್ತು

ರಾಜನು ಆಡಳಿತ ನಡೆಸಲು ಮಂತ್ರಿ ಪರಿಷತ್ತು ಸಹಾಯ ಮಾಡುತ್ತಿತ್ತು. ವೇದಗಳ ಕಾಲದಲ್ಲಿ ರತ್ನಿಗಳೆಂದು ಕರೆಯಲ್ಪಟ್ಟ ಮಂತ್ರಿಗಳಿದ್ದರು; ಇವರಲ್ಲಿ ಪುರೋಹಿತನು ರಾಜನ ಆಪ್ತಮಂತ್ರಿ. ಪುರೋಹಿತನಲ್ಲದೇ

ಉಳಿದ ಪ್ರಮುಖರಲ್ಲಿ ಪಟ್ಟಮಹಿಷಿ, ಸೂತ, ಸೈನ್ಯಾಧಿಪತಿ, ಸಂಗ್ರಹಿತೃ, ಭಾಗದುಘ್ —ಮುಖ್ಯರು. ಇವರಲ್ಲಿ ಕೆಲವರು ರಾಜನ ಬಂಧುವರ್ಗದವರಾಗಿದ್ದರು. ಕೆಲವರು ಸ್ನೇಹಿತರು; ಉಳಿದವರು ಪ್ರಮುಖ ವ್ಯಕ್ತಿಗಳು. ಕಾಲಕ್ರಮೇಣ ಮಂತ್ರಿ ಪರಿಷತ್ತು ಅಥವಾ ಸಚಿವಮಂಡಲಿಯನ್ನು ನೇಮಿಸುವುದು ರೂಢಿಗೆ ಬಂದಿತು. ಮಂತ್ರಿಗಳ ಸಂಖ್ಯೆ ೭ ರಿಂದ ೨೦ ರ ವರೆಗೆ ಇರುತ್ತಿತ್ತು. ಸಣ್ಣ ಸಣ್ಣ ಸಚಿವ ಮಂಡಲಿಗಳು ರೂಢಿಯಲ್ಲಿದ್ದವು. ಕೆಲವು ವೇಳೆ ೩ ರಿಂದ ೪ ಸಚಿವರನ್ನೊಳಗೊಂಡ ಸಣ್ಣ ಸಂಪುಟವು ರಾಜನ ಆಪ್ತ ಸಮಾಲೋಚನೆಗೂ, ಗುಪ್ತ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕಾಗಿಯೂ ರಚನೆಯಾಗುತ್ತಿತ್ತು. ಕೌಟಿಲ್ಯನ ಪ್ರಕಾರ ೧೨ ರಿಂದ ೧೬ ಮಂದಿ ಮಂತ್ರಿಗಳಿರಬಹುದು. ರಾಜನು ಮಂತ್ರಾಲೋಚನೆ ಮಾಡುವಾಗ ೩–೪ ಮಂತ್ರಿಗಳಿರತಕ್ಕದ್ದು. ಒಬ್ಬ ಅಥವಾ ಇಬ್ಬರು ಇರಲೇಕೂಡದೆಂದು ಹೇಳಿದ್ದಾನೆ. ಕಾಮಂದಕನ ಪ್ರಕಾರ ೧೦ ಮಂತ್ರಿಗಳಿರಬಹುದು. ಇವರುಗಳು ಯಾರೆಂದರೆ ಪುರೋಧ, ಪ್ರತಿನಿಧಿ, ಪ್ರಧಾನ, ಸಚಿವ, ಮಂತ್ರಿ, ಪ್ರಾಡ್ವಿವಾಕ, ಪಂಡಿತ, ಸುಮಂತ, ಅಮಾತ್ಯ, ದೂತ. ಶುಕ್ರನೀತಿಯಲ್ಲಿ ಮಂತ್ರಿಗಳ ಸಂಖ್ಯೆ ೭ರಿಂದ ೧೦ ರವರೆಗೆ ಇರಬಹುದೆಂದು ಹೇಳಿದೆ. ಮಂತ್ರಾರ್ಥದಲ್ಲಿ ಕುಶಲನಾದ ರಾಜನು ಸುಖವನ್ನೂ ಐಶ್ವರ್ಯವನ್ನೂ ಅನುಭವಿಸುವನು; ಇದಕ್ಕೆ ವಿಪರೀತವಾಗಿ ಸ್ವತಂತ್ರ ಕಾರುಬಾರ ಮಾಡುವವನು ತಿರಸ್ಕರಿಸಲ್ಪಡುವನು ಎಂದು ಕಾಮಂದಕನು ಹೇಳಿದ್ದಾನೆ.

ಮಂತ್ರಿಗಳನ್ನು ನೇಮಿಸುವಾಗ ಅವರ ಅರ್ಹತೆಗಳನ್ನು (ಅಮಾತ್ಯಸಂಪತ್) ಪರಿಶೀಲಿಸಲಾಗುತ್ತಿತ್ತು. ಅವರಿಗೆ ಅತ್ಯಂತ ಹೆಚ್ಚಿನ ಮಟ್ಟದ ಅರ್ಹತೆಗಳಿರಬೇಕೆಂದು ಶಾಸ್ತ್ರಗಳು ಹೇಳಿವೆ. ಪುರೋಹಿತ, ಪ್ರಧಾನ, ಸಚಿವ, ಮಹಾಬಲಾಧಿಕೃತ (ಯುದ್ಧ ಮಂತ್ರಿ), ಸೇನಾಪತಿ, ಮಹಾಸಂಧಿವಿಗ್ರಾಹಿಕ (ವಿದೇಶಾಂಗಮಂತ್ರಿ), ಪಂಡಿತ, ಸುಮಂತ್ರ ಅಥವಾ ಸಮಾಪರ್ತಾ— ಈ ಸ್ಥಾನಗಳಿಗೆ ನೇಮಿಸಲ್ಪಡುವವರು ಅಮೂಲ್ಯ ಅರ್ಹತೆಗಳನ್ನು ಹೊಂದಿರಬೇಕಾಗಿತ್ತು. ಇವರಲ್ಲಿ ವಿಧೇಯತೆ, ದಕ್ಷತೆ, ಜ್ಞಾನ, ವಿವೇಕ, ಧೈರ್ಯ, ವಾಕ್ಪಟುತ್ವ, ಗಾಂಭೀರ್ಯ, ವರ್ಚಸ್ಸು, ಗೌರವ, ಪ್ರಾಮಾಣಿಕತೆ ಮತ್ತು ಸತ್ಯಸಂಧತೆಯೇ ಮೊದಲಾದ ಗುಣಗಳಿರಬೇಕಾಗಿತ್ತು; ಸಚಿವ ಮಂಡಲದಲ್ಲಿ ಎಲ್ಲರೂ ಜಂಟಿಯಾಗಿ ಹೊಣೆಗಾರಿಕೆ ಹೊತ್ತಿದ್ದರೂ ಅರಸನ ತೀರ್ಮಾನವೇ ಅಂತ್ಯ ತೀರ್ಮಾನವಾಗಿತ್ತು. ಸಚಿವರುಗಳನ್ನು ರಾಜನೇ ನೇಮಿಸುತ್ತಿದ್ದನು. ಸಚಿವರುಗಳ ವೇತನ ಹಾಗೂ ಸಂಭಾವನೆ ಅಧಿಕವಾಗಿತ್ತು. ರಾಜನ ವಿಶ್ವಾಸಕ್ಕೆ ಅರ್ಹನಾಗಿರುವತನಕ ಮಂತ್ರಿಗಳು ಅಧಿಕಾರದಲ್ಲಿರಬಹುದಾಗಿತ್ತು. ಮಂತ್ರಿಗಳ ಸಲಹೆಗಳನ್ನು ರಾಜನು ಕೇಳಿದರೂ ಅವುಗಳಂತೆ ನಡೆಯಲೇಬೇಕೆಂಬ ನಿರ್ಬಂಧವಿರಲಿಲ್ಲ. ಆದರೆ ಯಾವ ಅರಸನೂ ಕೂಡ ಸಾಮಾನ್ಯವಾಗಿ ಮಂತ್ರಿಗಳ ಸಲಹೆಗಳನ್ನುಲ್ಲಂಘಿಸಲು ಸಿದ್ಧವಿರುತ್ತಿರಲಿಲ್ಲ. ಏಕೆಂದರೆ, ಮಂತ್ರಿಗಳು ಅನುಭವಶಾಲಿಗಳೂ, ವಿವೇಕಿಗಳೂ ಮತ್ತು ಜನಾನುರಾಗಿಗಳಾಗಿರುತ್ತಿದ್ದರು. ಮಂತ್ರಿಗಳು ಬೇರೆ ಬೇರೆ ಶಾಖೆಗಳನ್ನು ಹಂಚಿಕೊಂಡಿದ್ದರೂ ಎಲ್ಲರೂ ಒಟ್ಟಾಗಿ

ಸಲಹೆ ನೀಡುತ್ತಿದ್ದರು. ರಾಜನು ಮಂತ್ರಿಪರಿಷತ್ತಿನ ನಿರ್ಧಾರಗಳನ್ನು ಕಡೆಗಾಣಿಸದಂತೆ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುತ್ತಿದ್ದರು.

ಇತರ ಅಧಿಕಾರಿಗಳು

ಆಡಳಿತದ ಬೇರೆ ಬೇರೆ ಶಾಖೆಗಳಿಗೆ ಸಚಿವರುಗಳೇ ಅಲ್ಲದೆ ಉಚ್ಚತರಗತಿಯ ಅಧಿಕಾರಿಗಳಿರುತ್ತಿದ್ದರು. ಮೌರ್ಯ ಸಾಮ್ರಾಜ್ಯದಲ್ಲಿ ಅಮಾತ್ಯ, ಮಹಾಮಾತ್ರ ಮತ್ತು ಅಧ್ಯಕ್ಷ ರೆಂಬ ವಿಶೇಷ ಅಧಿಕಾರಿಗಳು ಮೇಲ್ವಿಚಾರಣೆ ನಡೆಸುತ್ತಿದ್ದರು. ಅರ್ಥಶಾಸ್ತ್ರದಲ್ಲಿ ೧೮ ಮಂದಿ ತೀರ್ಥ ಅಥವಾ ಅಧಿಕಾರಿಗಳ ಹೆಸರುಗಳಿವೆ. ಇವರು ಯಾರೆಂದರೆ, ಮಂತ್ರಿ, ಪುರೋಹಿತ, ಸೇನಾಪತಿ, ಯುವರಾಜ, ದೌವಾರಿಕ, ಅಂತರ್ವೇಶಿಕ, ಪ್ರಶಾಸ್ತ, ಸಮಾಹರ್ತೃ, ಸನ್ನಿಧಾತೃ, ಪ್ರದೇಷ್ಟೃ, ನಾಯಕ, ಪೌರ, ವ್ಯವಹಾರಿಕ, ಕಾರ್ಮಾಂತಿಕ, ಮಂತ್ರಿಪರಿಷಾಧ್ಯಕ್ಷ, ದಂಡಪಾಲ, ದುರ್ಗಪಾಲ, ಅಂತಪಾಲ. ಇವರಲ್ಲದೇ ಆಡಳಿತವು ಸುಸೂತ್ರವಾಗಿ ನಡೆಯಲು ಅಧ್ಯಕ್ಷರುಗಳಿರುತ್ತಿದ್ದರು—ಕೋಶ, ಆಕರ, ಲೋಹ, ಲಾಕ್ಷಣ (ಟಂಕಸಾಲೆ), ಲವಣ, ಸುವರ್ಣ, ಕೋಷ್ಠಾಗಾರ, ಪಣ್ಯ (ರಾಜ್ಯದ ವ್ಯಾಪಾರ), ಕುಪ್ಯ (ಅರಣ್ಯಸಂಪತ್ತು), ಆಯುಧಾಗಾರ, ಪೌತ್ರವ (ಅಳತೆ ಮತ್ತು ತೂಕ), ಮಾನ, ಶುಲ್ಕ, ಸೂತ್ರ (ನೂಲು ನೇಯ್ಗೆ), ಸಿತಾ (ರಾಜನ ಭೂಮಿಯ ಸಾಗುವಳಿ), ಸುರಾ (ಮದ್ಯದ ಅಂಗಡಿ), ಸೂಣ (ಮಾಂಸದ ಅಂಗಡಿಗಳು), ಮುದ್ರಾ, ವಿವೀತ (ಹುಲ್ಲುಗಾವಲುಗಳು), ದ್ಯೂತ, ಬಂಧ

ನಾಗಾರ, ಗಾವು, ನಾವೆ, ಪಟ್ಟಣ, ವಣಿಕ ಸಂಸ್ಥಾ (ವಾಣಿಜ್ಯ), ಮತ್ತು ದೇವತಾ (ಧಾರ್ಮಿಕ ಸಂಸ್ಥೆಗಳು) ಈ ಶಾಖೆಗಳಿಗೆ ಒಬ್ಬೊಬ್ಬ ಅಧ್ಯಕ್ಷರಿರುತ್ತಿದ್ದರು. ಸೈನ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ಪತ್ತಿ, ಅಶ್ವ, ಹಸ್ತಿ ಮತ್ತು ರಥ ಇವುಗಳ ಆಡಳಿತಕ್ಕೂ ಅಧ್ಯಕ್ಷರಿದ್ದರು.

ಗುಪ್ತರ ಕಾಲದಲ್ಲಿಯೂ ಅರಸನು ಮಂತ್ರಿಗಳ ಸಹಾಯದಿಂದ ಆಡಳಿತವನ್ನು ನಡೆಸುತ್ತಿದ್ದನು. ಮಂತ್ರಿಗಳಲ್ಲದೆ ಪ್ರಾಂತ್ಯಗಳಲ್ಲಿ (ದೇಶ ಅಥವಾ ಭುಕ್ತಿ) ಉಪರಿಕ ಮಹಾರಾಜ (ಪ್ರಾಂತ್ಯಾಧಿಕಾರಿ– Governor) ಅಥವಾ ಗೋಪ್ತರೂ, ಕುಮಾರಾಮಾತ್ಯ, ಮಹಾದಂಡನಾಯಕ, ವಿನಯಸ್ಥಿತಿ ಸ್ಥಾಪಕ, ನೀತಿನಿಯಾಮಕ, ಮಹಾಪ್ರತೀಹಾರ (ಅರಸನ ಅಂತರಂಗ ಸಚಿವ), ಭಟಾಶ್ವಪತಿ (ಕಾಲಾಳು ಮತ್ತು ಅಶ್ವ ಬಲ ಮೇಲಾಧಿಕಾರಿ), ದಂಡಪಾಶಾಧಿಕರಣ (ರಕ್ಷಣಾಪಡೆಯ ಮುಖ್ಯಸ್ಥ), ವಿಷಯಪತಿ (ಜಿಲ್ಲೆಯ ಅಧಿಕಾರಿ), ಅಥವಾ ತನ್ನಿಯುಕ್ತಕ, ನಗರಶ್ರೇಷ್ಠಿ, ಸಾರ್ಥವಾಹ (ವರ್ತಕ ಪ್ರಮುಖ), ಪ್ರಥಮ ಕುಲಿಕ (ಉದ್ದಿಮೆಗಳ ಪ್ರಮುಖ), ಪ್ರಥಮ ಕಾಯಸ್ಥ (ಲೇಖಕ ಕಾರ್ಯಾಲಯದ ಪ್ರಮುಖಾಧಿಕಾರಿ), ಪುಸ್ತಪಾಲ (ಪತ್ರವ್ಯವಹಾರಗಳನ್ನು ರಕ್ಷಿಸುವವ), ಗ್ರಾಮಿಕ ಎಂಬ ಅಧಿಕಾರಿಗಳಿದ್ದರು.

ಶ್ರೀ ಹರ್ಷನ ಕಾಲದಲ್ಲಿ ಮಂತ್ರಿಪರಿಷತ್ತಿನ ಜತೆಗೆ ಈ ಕೆಳಕಂಡ ಅಧಿಕಾರಿ ವರ್ಗದವರಿದ್ದರು. ರಾಜಸ್ಥಾನೀಯ, (ಪ್ರಾಂತಾಧಿಕಾರಿ – Governor; Viceroy), ಲೋಕ–ಪಾಲ ಅಥವಾ ಉಪರಿಕಮಹಾರಾಜ, ಮಹಾಸಂಧಿವಿಗ್ರಹಾಧಿ

ಕೃತ, ಮಹಾಬಲಾಧಿಕೃತ, ಸೇನಾಪತಿ, ಬೃಹದಶ್ವವಾರ (ಅಶ್ವಪಡೆಯ ಮುಖ್ಯಾಧಿಕಾರಿ), ಕಟುಕ, ಚಾಟ ಭಟ (ಸೈನಿಕರು ಮತ್ತು ಇತರರು), ದೂತ, ವಿಷ್ಯಪತಿ, ಆಯುಕ್ತಕ, ಮೀಮಾಂಸಕ, ಮಹಾಪ್ರತೀಹಾರ, ಭೋಗಿಕ ಅಥವಾ ಭೋಗಪತಿ, ದೀರ್ಘಾದ್ವಗ (ಕ್ಷಿಪ್ರವಾರ್ತಾಹರ), ಅಕ್ಷಪಟಲಿಕ (ಪತ್ರಗಳನ್ನು ರಕ್ಷಿಸುವವ), ಅಧ್ಯಕ್ಷ, ಲೇಖಕ, ಕರಣಿಕ ಮತ್ತು ಸೇವಕ. ಸಾಮಂತರು ಮತ್ತು ಮಹಾ ಸಾಮಂತರು.

ಪ್ರಾಂತ್ಯಾಡಳಿತ

ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ಪ್ರಾಂತ್ಯಗಳನ್ನಾಗಿ ವಿಭಜಿಸುವ ಪದ್ಧತಿಯಿತ್ತು. ಈ ಪ್ರಾಂತ್ಯಗಳ ಆಡಳಿತವು ಅರಸನ ಕುಟುಂಬಕ್ಕೆ ಸಂಬಂಧಿಸಿದ ಅಥವಾ ನೇಮಿಸಲ್ಪಟ್ಟ ರಾಜಪ್ರತಿನಿಧಿಗಳಿಂದ ನಡೆಯುತ್ತಿತ್ತು ಹಾಗೂ ಅರಸನಿಂದ ನೇಮಕವಾದ ಸಾಮಂತ ರಾಜರೂ ಇದ್ದರು. ಪ್ರಾಂತೀಯ ಅಧಿಕಾರಿಗಳಿಗೆ ಹೆಚ್ಚಿನ ಸ್ವಾತಂತ್ರ್ಯವಿತ್ತು; ಅವರಿಗೆ ಪ್ರತ್ಯೇಕ ಮಂತ್ರಿಗಳೂ ಇದ್ದರು. ನ್ಯಾಯಪಾಲನೆ, ಶಾಂತಿಸ್ಥಾಪನೆ, ಕರಗಳ ವಸೂಲಿ, ಲೆಕ್ಕಪತ್ರಗಳ ಶೋಧನೆ, ಖರ್ಚಿನ ವಿವರಗಳ ಮೇಲೆ ಗಮನವಿಡುವುದು ಮುಂತಾದ ಮುಖ್ಯ ಕರ್ತವ್ಯಗಳಿದ್ದವು. ಪ್ರಾಂತ್ಯದ ಹಾಗೂ ಜಿಲ್ಲೆಯ ಆಡಳಿತವ ಮೇಲೆ ಹಿಡಿತವನ್ನಿಟ್ಟುಕೊಳ್ಳುವುದು, ಕೇಂದ್ರದ ಶಾಸನಕ್ಕೆ ಆಗತ್ಯಬಿದ್ದಾಗ ಸೈನ್ಯವನ್ನೊದಗಿಸುವುದು, ರಾಜನ ವರ್ಧಂತಿ, ಮಹಾನವಮಿ, ಯುಗಾದಿಯಂತಹ

ನಿಯಮಿತಕಾಲಕ್ಕೆ ಕಪ್ಪವನ್ನು ಸಲ್ಲಿಸುವುದು. ಪ್ರಾಂತ್ಯಗಳಲ್ಲಿ ಆಗಿಂದಾಗ್ಗೆ ಸಂಚಾರಮಾಡಿ ಕಂದಾಯ ವಸೂಲಿ, ವಿವಾದ ವ್ಯಾಜ್ಯಗಳ ನಿರ್ಣಯ, ದುರ್ಗ, ಗಡಿ, ಕೋಟೆ, ರಾಜಮಾರ್ಗಗಳ ರಕ್ಷಣೆ ಮೊದಲಾದ ಕಾರ್ಯಗಳನ್ನೂ ಪ್ರಾಂತಾಧಿಕಾರಿಗಳು ನೆರವೇರಿಸಬೇಕಾಗಿತ್ತು.

ಪ್ರಾಂತ್ಯಗಳ ಹೆಸರುಗಳು ಬೇರೆ ಬೇರೆ ಇದ್ದವು. ಉತ್ತರದಲ್ಲಿ ರಾಷ್ಟ್ರ, ಆಹಾರ, ಜನಪದ, ದೇಶ, ವಿಷಯ, ಭುಕ್ತಿ, ದಕ್ಷಿಣದಲ್ಲಿ ರಾಜ್ಯ, ರಾಷ್ಟ್ರ, ವಿಷಯ, ನಾಡು, ಮಂಡಲ ಎಂಬ ಹೆಸರುಗಳಿದ್ದವು.

ಪರಕೀಯರ ಆಕ್ರಮಣ ಕಾಲದಲ್ಲಿ ಅಥವಾ ರಾಜ್ಯದಲ್ಲಿ ಅಂತಃಕಲಹಗಳು ತಲೆದೋರಿದಾಗ ಪ್ರಾಂತಗಳು ಕೇಂದ್ರದಿಂದ ಪ್ರತ್ಯೇಕವಾಗಿ ಸ್ವತಂತ್ರವಾಗಲು ಹವಣಿಸುತ್ತಿದ್ದವು. ಪ್ರಬಲವಾದ ಕೇಂದ್ರ ಆಡಳಿತವನ್ನು ಸ್ಥಾಪಿಸಿದ ಸಾರ್ವಭೌಮರ ಕಾಲದಲ್ಲಿ ಪ್ರಾಂತ್ಯಗಳೆಲ್ಲವೂ ಕೇಂದ್ರ ಸರಕಾರದೊಡನೆ ಸಹಕರಿಸುತ್ತಿದ್ದವು.

ಸ್ಥಾನಿಕ ಆಡಳಿತ

ಆಡಳಿತ ವ್ಯವಸ್ಥೆಯಲ್ಲಿ ಅತ್ಯಂತ ಕಟ್ಟಕಡೆಯ ವಿಭಾಗ ಗ್ರಾಮ. ಗ್ರಾಮದ ಆಡಳಿತವನ್ನು ನೋಡಿಕೊಳ್ಳಲು ಗ್ರಾಮಣಿ ಎಂಬ ಅಧಿಕಾರಿಯಿದ್ದನು. ಈತನ ಹುದ್ದೆ ವಂಶಪರಂಪರೆಯಾಗಿ ಬಂದದ್ದು. ಗ್ರಾಮವನ್ನು ಕಳ್ಳರಿಂದ ರಕ್ಷಣೆ ಮಾಡುವುದು, ರಾಜನಿಗೆ ಸಲ್ಲಬೇಕಾದ ಕಂದಾಯ

ವನ್ನು ವಸೂಲಿ ಮಾಡಿ ಕೇಂದ್ರಕ್ಕೆ ಒಪ್ಪಿಸುವುದು. ಗ್ರಾಮದ ಲೆಕ್ಕಪತ್ರಗಳನ್ನಿಡುವ ಅಧಿಕಾರಿಯ ಮೇಲೆ ಉಸ್ತುವಾರಿ ಇಡುವುದು ಗ್ರಾಮಣಿಯ ಮುಖ್ಯ ಕರ್ತವ್ಯಗಳಾಗಿದ್ದವು. ಗ್ರಾಮಗಳಲ್ಲಿ ಪಂಚಾಯತಿ ಸಭೆಯಿತ್ತು. ಗ್ರಾಮದ ಆಡಳಿತದಲ್ಲಿ ಸಭೆಯ ಪಾತ್ರ ಅತ್ಯಂತ ದೊಡ್ಡದು ಮತ್ತು ನಿಕಟ ಸಂಬಂಧವನ್ನು ಹೊಂದಿದ್ದೂ ಆಗಿತ್ತು. ಗ್ರಾಮಣಿಯು ಈ ಸಭೆಯೊಡನೆ ಸಹಕರಿಸಬೇಕಾಗಿತ್ತು. ಗ್ರಾಮದ ಗಣ್ಯ ಗೃಹಸ್ಥರೆಲ್ಲರೂ ಗ್ರಾಮಸಭೆಯ ಸದಸ್ಯರಿರುತ್ತಿದ್ದರು. ಮದ್ದಲೆಯ ಸಪ್ಪಳದಿಂದ ಸಭೆಯನ್ನು ಕೂಡಿಸುವ ಪದ್ಧತಿಯಿತ್ತು. ಪಂಚಮಂಡಲಿ ಅಥವಾ ಗ್ರಾಮ ಜನಪದ ಎಂಬ ಗ್ರಾಮ ಪ್ರತಿನಿಧಿಗಳು ಜನಾಭಿಪ್ರಾಯವನ್ನು ತಿಳಿದು ಆಡಳಿತ ಸುಸೂತ್ರವಾಗಿ ನಡೆಯಲು ಸಹಾಯಮಾಡುತ್ತಿದ್ದರು; ನ್ಯಾಯ ತೀರ್ಮಾನ ಮಾಡುವುದೂ ಇವರ ಕೆಲಸವಾಗಿತ್ತು. ಭಂಗಾರ ಸಂರಕ್ಷಣೆ ಮತ್ತು ಪಿರೆಯ ಕೆಲಸ, ಗ್ರಾಮನೈರ್ಮಲ್ಯ, ಉದ್ಯಾನವನಗಳ ನಿರ್ಮಾಣ, ನೀರಿನ ಪೂರೈಕೆ, ವ್ಯಾಜ್ಯ ತೀರ್ಮಾನ—ಇವೂ ಸಹ ಗ್ರಾಮಸಭೆಯ ಕಾರ್ಯಗಳಾಗಿದ್ದವು. ಕೆಲವು ಗ್ರಾಮಸಭೆಗಳು ಬಡ್ಡಿ ವ್ಯವಹಾರ ಕೆಲಸಗಳನ್ನೂ ನಿರ್ವಹಿಸುತ್ತಿದ್ದವು. ಗ್ರಾಮಸಭೆಯು ತನ್ನ ಆಡಳಿತವನ್ನು ನಡೆಸಲು ರಾಜ್ಯಸರ್ಕಾರವು ಗ್ರಾಮಾದಾಯದ ಒಂದು ಭಾಗವನ್ನೂ, ತಪ್ಪುಮಾಡಿದವರಿಗೆ ವಿಧಿಸುವ ದಂಡ, ಕರ, ನಿರ್ದಿಷ್ಟ ಕೆಲಸಗಳಿಗೆ ವಿಧಿಸುವ ಕರಗಳಲ್ಲಿ ಸ್ವಲ್ಪ ಭಾಗವನ್ನೂ ಒದಗಿಸಿ ಧನಸಹಾಯ ಮಾಡುತ್ತಿತ್ತು. ಗ್ರಾಮಸಭೆಗಳು ಗ್ರಾಮದ ಜನರ ಕಲ್ಯಾಣಕ್ಕಾಗಿ ಶ್ರಮಿಸಿ ರಾಜ್ಯ

ಸರ್ಕಾರ ಹಾಗೂ ಗ್ರಾಮದ ಜನರ ನಡುವೆ ನಿಂತು ಕಾರ್ಯಭಾರವನ್ನು ನಡೆಸುತ್ತಿದ್ದವು. ಕೇಂದ್ರ ಸರ್ಕಾರವು ಗ್ರಾಮಾಡಳಿತದ ಮೇಲೆ ಮೇಲ್ವಿಚಾರಣೆ ನಡೆಸುವ ಹಕ್ಕನ್ನಿಟ್ಟುಕೊಂಡಿದ್ದರೂ ಗ್ರಾಮಸಭೆಯ ಆಡಳಿತದ ಮಧ್ಯೆ ತಲೆ ಹಾಕುತ್ತಿರಲಿಲ್ಲ; ಕೇಂದ್ರ ಸರ್ಕಾರವು ನೆರವೇರಿಸಬೇಕಾಗಿದ್ದ ಕೆಲಸಗಳಲ್ಲಿ ಅಂದರೆ ವಿದ್ಯಾಭಿವೃದ್ಧಿ, ಕಲಾಪ್ರೋತ್ಸಾಹ, ಧಾರ್ಮಿಕ ಪ್ರೋತ್ಸಾಹ ಇತ್ಯಾದಿ ಕಾರ್ಯಗಳಿಗೆ ಗ್ರಾಮಸಭೆಗಳು ತಮ್ಮ ಅಲ್ಪ ಆದಾಯದಲ್ಲಿ ಹಣ ಒದಗಿಸಿ ಸಹಾಯ ಮಾಡುತ್ತಿದ್ದವು. ರಾಜನು ದಾನವಾಗಿ ಕೊಟ್ಟ ಭೂಮಿಯ ಸೀಮೆಯ ನಿರ್ಧಾರ ಮಾಡುವುದರಲ್ಲಿಯೂ ಗ್ರಾಮ ಮುಖಂಡರು ಸಹಾಯ ಮಾಡುತ್ತಿದ್ದರು. ಗ್ರಾಮಗಳಲ್ಲಿ ೭ ಅಥವಾ ೧೮ ಪ್ರಕೃತಿಗಳು (ಸಮಾಜ ಪ್ರಮುಖರು –Eighteen Communities) ಪಂಚಾಯಿತರಾಗುತ್ತಿದ್ದರು. ರಾಜನು ಇವರ ಹಿತವನ್ನು ಗಮನಿಸುತ್ತಿದ್ದನು. ಯುದ್ಧಕಾಲದಲ್ಲಿ ಗ್ರಾಮದ ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಈ ಗ್ರಾಮಸಭೆಗಳು ಗ್ರಾಮಗಳ ಅಭಿವೃದ್ಧಿಯ ಮತ್ತು ಭದ್ರತೆಯ ಅಡಿಗಲ್ಲಾಗಿದ್ದವು. ಗ್ರಾಮದ ಜೀವನಾಡಿಯಲ್ಲಿ ಬೆರತು ತಮ್ಮ ಕಾರ್ಯಗಳನ್ನು ನೆರವೇರಿಸುತ್ತಿದ್ದವು.

ಗ್ರಾಮಸಭೆಗಳ ಕಾರ್ಯಕ್ಷೇತ್ರದಲ್ಲಿ ಪ್ರಜಾಪ್ರಭುತ್ವದ ಪದ್ಧತಿಗಳಿಗೇನೂ ಕೊರತೆಯಿರಲಿಲ್ಲವೆಂದು ಚೋಳರ ಅರಸ ಪರಾಂತಕನ ಉತ್ತರಮೇರೂರು ಶಾಸನದಿಂದ ವ್ಯಕ್ತವಾಗುತ್ತದೆ. ಕ್ರಿ. ಶ. ೯೧೯ ರಲ್ಲಿ ಮತ್ತು ಎರಡನೆಯ ಸಲ

೯೨೧ ರಲ್ಲಿ ಅರಸನಿಂದ ನೇಮಿಸಲ್ಪಟ್ಟ ಅಧಿಕಾರಿಯು ಅಗ್ರಹಾರದ ಜನರನ್ನೆಲ್ಲಾ ಸಭೆ ಸೇರಿಸಿ ತನ್ನ ಅಧ್ಯಕ್ಷತೆಯಲ್ಲಿ ಆಡಳಿತ ವ್ಯವಸ್ಥೆಯನ್ನೇರ್ಪಡಿಸಿದನು. ಆ ಅಗ್ರಹಾರದಲ್ಲಿ ೩೦ ಚೇರಿ ಅಥವಾ ಬಡಾವಣೆಗಳಿದ್ದವು. ಪ್ರತಿಯೊಂದು ಚೇರಿಯಿಂದ ಚುನಾವಣೆಗೆ ನಿಂತವರು ಆಸ್ತಿ, ವಿದ್ಯೆ, ವಯಸ್ಸು ಮತ್ತು ಪ್ರಾಮಾಣಿಕತೆ ಮೊದಲಾದ ಅರ್ಹತೆಗಳನ್ನು ಹೊಂದಿರಬೇಕು. ಕಾಲುವೇಲಿ (ವೇಲಿ ಪ್ರಮಾಣದ ಭೂಮಿ) ಭೂಮಿ ಅಥವಾ ಮನೆಯ ಒಡೆತನ, ಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದಿರುವುದು, ಪ್ರಾಮಾಣಿಕತೆಯಿಂದ ಐಶ್ವರ್ಯ ಸಂಪಾದನೆ, ೩೦ ರಿಂದ ೬೦ ವರ್ಷ ವಯಸ್ಸು– ಈ ಅರ್ಹತೆಗಳನ್ನು ಹೊಂದಿರಬೇಕಾಗಿತ್ತು. ಚುನಾವಣೆಗೆ ನಿಂತ ಉಮೇದುವಾರರು ತಾವು ಸ್ಪರ್ಧಿಸುವ ಕಾಲಕ್ಕೆ ೩ ವರ್ಷದ ಹಿಂದೆ ಅಧಿಕಾರದಲ್ಲಿರಕೂಡದು. ಪರಾಂತಕನು ತನ್ನ ಆಳ್ವಿಕೆಯಲ್ಲಿ ಮತ್ತೆ ಕೆಲವು ಮಾರ್ಪಾಡುಗಳನ್ನು ಮಾಡಿ ವಯೋಮಿತಿಯನ್ನು ೩೫ ರಿಂದ ೭೦ ರ ವರೆಗೆಂದು ನಿರ್ಣಯಿಸಿದನು. ಆಗಿನ ಕಾಲದಲ್ಲಿ ರೂಢಿಯಲ್ಲಿದ್ದ ಅನರ್ಹತೆಗಳು ನಮಗೆ ಮತ್ತಷ್ಟು ಆಶ್ಚರ್ಯವನ್ನುಂಟು ಮಾಡುವಂತಿವೆ:—ಅಧಿಕಾರದಲ್ಲಿದ್ದು ಸರಿಯಾಗಿ ಲೆಕ್ಕವನ್ನಿಡದಿದ್ದವರು, ಅವರ ಬಂಧುವರ್ಗ–ಮಕ್ಕಳು, ಚಿಕ್ಕಪ್ಪ, ದೊಡ್ಡಪ್ಪ, ಮಾವ, ಸಹೋದರರು ಇತ್ಯಾದಿ–ಅವರೊಡನೆ ವಿವಾಹ ಸಂಬಂಧ ಬೆಳೆಸಿದ ಕುಟುಂಬ ವರ್ಗದವರೂ, ಘೋರ ಪಾತಕಿಗಳೂ, ಲಂಚಕೋರರೂ, ಪ್ರಾಯಶ್ಚಿತ್ತ ಮಾಡಿಕೊಂಡವರೂ ಸಹ ಚುನಾವಣೆಗೆ ನಿಲ್ಲುವಂತಿರಲಿಲ್ಲ.

ಅರ್ಹತೆಪಡೆದಿದ್ದವರು ತಮ್ಮ ಚೇರಿ ಅಥವಾ ಕ್ಷೇತ್ರಗಳಲ್ಲಿ ಚುನಾವಣೆ ಚಳುವಳಿ ನಡೆಸಿ ಮತ ಕೇಳುತ್ತಿದ್ದರು. ಅಗ್ರಹಾರದ ದೇವಸ್ಥಾನದ ಮಂಟಪದಲ್ಲಿ ಹಿರಿಯರೂ, ಕಿರಿಯರೂ ಸಭೆ ಸೇರುತ್ತಿದ್ದರು. ಮತ ಕೊಡುವವರು ತಮ್ಮಿಷ್ಟಕ್ಕೆ ಬಂದ ಹೆಸರನ್ನು ಓಲೆ (Ticket) ಚೀಟಿಯಲ್ಲಿ ಬರೆದು ಒಂದೊಂದು ಚೇರಿಗೂ ಪ್ರತ್ಯೇಕವಾಗಿ ಮುದ್ರೆ ಹಾಕಿ ಮುಚ್ಚಿಟ್ಟಿದ್ದ 'ಕುಡವೋಲೈ (Pot – ಕೊಡ)' ನಲ್ಲಿ ಹಾಕುತ್ತಿದ್ದರು. ಮತ ಕೊಡುವ ವೇಳೆಯು ಮುಗಿದ ನಂತರ ಮಧ್ಯಸ್ಥನು ಓಲೆಗಳನ್ನೆಲ್ಲಾ ಒಟ್ಟುಗೂಡಿಸಿ ಒಂದೊಂದು ಕೊಡವನ್ನು ಎತ್ತಿ ಒಬ್ಬ ಹಿರಿಯನ ಕೈಗೆ ಕೊಡುವನು. ಆತನು ಕೊಡದ ಮುದ್ರೆಯನ್ನು ಎಲ್ಲರಿಗೂ ತೋರಿಸಿ ಕುಲುಕಿ ಮುದ್ರೆಯನ್ನೊಡೆದು ಒಬ್ಬ ಸಣ್ಣ ಬಾಲಕನಿಂದ ಒಂದು ಓಲೆಯನ್ನು ತೆಗೆಸುವನು. ತಕ್ಷಣವೇ ಕೊಡವನ್ನು ಪುನಃ ಕುಲುಕುವನು. ಬಾಲಕನು ತೆಗೆದ ಓಲೆಯನ್ನು ಮಧ್ಯಸ್ಥನು ತೆಗೆದುಕೊಂಡು ತನ್ನ ಕೈ ಮತ್ತು ವಸ್ತ್ರಗಳನ್ನು ಓಲೆಗೆ ಮರೆಯಾಗದಂತೆ ಹಿಂದಕ್ಕೆ ತೆಗೆದುಕೊಂಡು ಓಲೆಯಲ್ಲಿ ಬರೆದಿರುವ ಹೆಸರನ್ನು ಎಲ್ಲರಿಗೂ ಕೇಳಿಸುವಂತೆ ಓದುವನು. ಹಾಗೆಯೇ ಅವನ ಹತ್ತಿರ ಇದ್ದ ಜನರೂ ಓದುವರು. ಈ ರೀತಿಯಲ್ಲಿ ೩೦ ಚೇರಿಗೂ ೩೦ ಸದಸ್ಯರನ್ನು ಆರಿಸುತ್ತಿದ್ದರು. ಇವರಲ್ಲಿ ೧೨ ಜನ ಸದಸ್ಯರು ಸಂವತ್ಸರ ಸಮಿತಿಗೂ (ಪಂಚವಾರವಾರಿಯಂ ಅಥವಾ ಸಮಗ್ರ ಆಡಳಿತಕ್ಕಾಗಿ), ಮತ್ತೆ ೧೨ ಜನ ಸದಸ್ಯರು ತೋಟದ ಸಮಿತಿಗೂ, ಮತ್ತೆ ೬ ಸದಸ್ಯರು ಏರಿವಾರಿ ಸಮಿತಿಗೂ (ಕೆರೆ, ಕಾಲುವೆಗಳ ಆಡಳಿತಕ್ಕಾಗಿ) ಆಯ್ಕೆ

ಯಾಗುತ್ತಿದ್ದರು. ಉಳಿದ ಓಲೆಗಳಿಂದ ಪೊನ್ವಾರಿಯಂ (ತೋಟ, ಹೊಲ, ದೇವಾಲಯ, ಧರ್ಮಕಾರ್ಯ, ನ್ಯಾಯ, ಭಂಗಾರ ಇವುಗಳ-ಆಡಳಿತಕ್ಕಾಗಿ) ಕರಣಿಕರು ಮುಂತಾದ ಅಧಿಕಾರಿಗಳು ಆಯ್ಕೆಯಾಗುತ್ತಿದ್ದರು. ಈ ಸಮಿತಿಗಳು ವರ್ಷಕ್ಕೆ ೩೬೦ ದಿವಸಗಳಲ್ಲಿ ಕೆಲಸ ಮಾಡುತ್ತಿದ್ದವು, ಉಳಿದ ೫ ದಿವಸಗಳಲ್ಲಿ ಆ ವರ್ಷದ ಲೆಕ್ಕ ತಪಾಸಣೆಯಾಗುತ್ತಿತ್ತು.

ಚುನಾವಣೆಯ ಪದ್ಧತಿಯನ್ನನುಸರಿಸಿ ಗ್ರಾಮಾಡಳಿತವನ್ನು ನಡೆಸುವುದರ ಜೊತೆಗೆ ಈ ಸಭೆಗಳು ಧರ್ಮ ಸಭೆಗಳಾಗಿ ನ್ಯಾಯ ತೀರ್ಮಾನವನ್ನೂ ಸಹ ನಿರ್ಣಯಿಸುತ್ತಿದ್ದವು. ಹರಿಹರ ಕೃತ ನಂಬಿಯಣ್ಣನ ರಗಳೆಯಲ್ಲಿ ಶಿವನು ವೃದ್ಧ ವೇಷ ಧಾರಿಯಾಗಿ ಹಿಂದಿನ ಪತ್ರಗಳ ಆಧಾರದ ಮೇಲೆ ನಂಬಿಯಣ್ಣನ ಮೇಲೆ ಆರೋಪ ತಂದ ಪ್ರಸಂಗವು ಬಹು ಸ್ವಾರಸ್ಯವಾಗಿ ವರ್ಣಿಸಲ್ಪಟ್ಟಿದೆ. ಅದು ಹೀಗೆ: ಶಿವನ ಗಣಗಳಲ್ಲಿ ಪುಷ್ಪದಂತ ನೆಂಬುವನು ಶಾಪಹೊಂದಿ ಭೂಲೋಕದಲ್ಲಿ ತಿರುವೆಣ್ಣನಲ್ಲೂರಿ ಒಂದು ಬಡ ಕುಟುಂಬದಲ್ಲಿ ನಂಬಿಯೆಂಬ ಹೆಸರಿನಿಂದ ಜನಿಸುವುದು: ಈತನು ಬಾಲ್ಯದಲ್ಲಿಯೇ ತೋರಿಸಿದ ಪ್ರತಿಭೆಯನ್ನು ಕಂಡು ಹೆತ್ತ ತಾಯಿತಂದೆಯರು ಆ ಊರಿನ ರಾಜನಿಗೆ ಸಾಕಿಕೊಳ್ಳಲು ಕೊಡುವುದು: ರಾಜಕುಮಾರನಾದ ನಂತರ ಆತನ ಹೆಸರು ಸೌಂದರಪೆರುಮಾಳ್ ಎಂದಾದದ್ದು; ಕುಮಾರನ ಲಗ್ನ ನಿಶ್ಚಯವಾಗಿ ಮುಹೂರ್ತ ಸಮಯದಲ್ಲಿ ಶಿವನು ಆತನಿಗೆ ಪೂರ್ವಸ್ಮರಣೆ ತಂದುಕೊಟ್ಟು ಸನ್ಮಾರ್ಗಕ್ಕೆ ತರುವ ಉಪಾಯ ಹೂಡಿದುದು; ಮುಹೂರ್ತ ಸಮಯಕ್ಕೆ ಸರಿಯಾಗಿ ಶಿವನು ಮಣಿಮುಂದಪುತ್ತೂರಿಗೆ ವೃದ್ಧನ ವೇಷ ಧರಿಸಿ

ಕೊಂಡು ಬಂದು ಕುಮಾರನ ಲಗ್ನ ನಡೆಯಕೂಡದೆಂದೂ ಆತನು ಸಾಲ ತೀರಿಸಬೇಕೆಂದೂ, ಆತನು ರಾಜಕುಮಾರನಲ್ಲವೆಂದೂ, ಆತನು ನಂಬಿಯೆಂದೂ ಹೇಳಿ ಅಲ್ಲಿ ಸೇರಿದ್ದ ಜನರಿಗೆಲ್ಲಾ ಆಶ್ಚರ್ಯವುಂಟು ಮಾಡಿ ಶುಭಸೂಚಕ ವಸ್ತುಗಳನ್ನೆಲ್ಲಾ ಕಿತ್ತುಹಾಕಿ ಘಳಿಗೆ ಬಟ್ಟಲನ್ನು ಒಡೆದುಹಾಕಿದುದು; ವೃದ್ಧನು ತಂದಿದ್ದ ಸಾಲಪತ್ರದಲ್ಲಿ ಸಂವತ್ಸರ ಮಾಸ ತೇದಿ, ಸಾಕ್ಷಿದಾರರ ಹೆಸರುಗಳು ಇತ್ಯಾದಿ ಕಂಡುಬಂದದ್ದು೧; ಕುಮಾರನು ತಾನು ಸಾಲ ಯಾರಿಗೂ ಕೊಡಬೇಕಾಗಿಲ್ಲವೆಂದೂ ಹೇಳಿದುದು; ಅದಕ್ಕೆ ಪ್ರತ್ಯುತ್ತರವಾಗಿ ವೃದ್ಧನು ತಿರುವೆಣ್ಣನಲ್ಲೂರಿಗೆ ಬಂದರೆ ಸಾಕ್ಷಿದಾರರನ್ನು ಕರಯಿಸಿ ತನ್ನ ಪತ್ರದ ನಿಜಾಂಶವನ್ನು ರುಜುವಾತು ಪಡಿಸುವೆನೆಂದು ಹೇಳಿದುದೂ, ನಂಬಿ ತಿರುವೆಣ್ಣನಲ್ಲೂರೆಂಬ ಗ್ರಾಮಕ್ಕೆ ಹೊರಟಿದ್ದು; ಎಲ್ಲೆಲ್ಲಿ ಹುಡುಕಿದರೂ ವೃದ್ಧನು ಕಾಣದೇ ಕಡೆಗೆ ಜನರ ಗುಂಪೊಂದರಲ್ಲಿ ಕಾಣಿಸಿಕೊಂಡು ತನ್ನ ಹೆಸರು

---

೧ ಮೊದಲ ಈಶ್ವರ ಸಂವತ್ಸರದ ಮಾಘ ಬಹುಳ ಚತುರ್ದಶಿಯು ಸೋಮವಾರದಂದು ಭಕ್ತಪುರದ ಸ್ಮಶಾನಶಯನ ಭಟ್ಟರಿಗೆ ಶಿವಬ್ರಾಹ್ಮಣರಪ್ಪ ಜಡೆಯ ನಾಯನಾರುಂ ಯಸ್ಯಜ್ಞಾನಿದೇವಿಯರುಂ ತಾವಿರ್ದ ವಂಶಾವಳಿಯಾಗಿ ಬಂದ ಬಳಿದೊತ್ತಿರ ಮಕ್ಕಳಾದ ಕಾರಣದಿಂ ತಮ್ಮ ಪುತ್ರ ನಂಬಿಯುಂ ಬಳಿದತ್ತಾಗಿ ಕೊಟ್ಟರು. ಇಂತಪ್ಪುದಕ್ಕೆ ಸಾಕ್ಷಿಗಳು ತಿರುವೆಣ್ಣನಲ್ಲೂರ ರುದ್ರಭಟ್ಟರು, ಮಾಹೇಶ್ವರ ಭಟ್ಟರು, ರುದ್ರಸಭಾಪತಿಗಳು, ಈಶಾನಭಟ್ಟರು, ಸಹಸ್ರವೇದಿಗಳು ಮೊದಲಾದ ಮಹಾಸಭ್ಯರ ಸಾಕ್ಷಿ ಆ ವೂರ ಗಣಕ ತಿರುಚಿಟ್ಟಂ ಬಲಮುಳಫೆಯರ ಲಿಖಿತವೆಂದು.. – ನಂಬಿಯಣ್ಣನ ರಗಳೆ — ಪುಟ ೪೩.

ಸ್ಮಶಾನಶಯನ ಭಟ್ಟನೆಂದು ಹೇಳಿ ಅಲ್ಲಿದ್ದವರ ಪರಿಚಯುವ ನ್ನೆಲ್ಲಾ ಹೇಳಿದುದೂ, ನಂಬಿಗೆ ವಿಪರೀತ ಕೋಪ ಬಂದು ವೃದ್ಧನಲ್ಲಿದ್ದ ಸಾಲಪತ್ರವನ್ನು ನೋಡುವೆನೆಂದು ಹೇಳಿ ಅದನ್ನು ಹರಿದುಹಾಕಿದುದು, ಆ ವೇಳೆಯಲ್ಲಿ ವೃದ್ಧನು ಹರಿದುಹಾಕಿದ ಪತ್ರವು ನಕಲು ಪ್ರತಿಯೆಂದೂ, ದುಷ್ಟಜನರು ಆ ರೀತಿ ಮಾಡಬಹುದೆಂಬ ಸಂದೇಹದ ಮೇಲೆ ಆತನ ಪತ್ನಿಯು ಮೂಲಪ್ರತಿಯನ್ನು ಕೊಡದೆ ನಕಲು ಪ್ರತಿಯನ್ನು ಮಾತ್ರ ಕಳುಹಿಸಿಕೊಟ್ಟಳೆಂದೂ, ಮೂಲಪ್ರತಿಯು ಚೇರಮನ ಪುರದಲ್ಲಿರುವುದೆಂದು ಹೇಳಿದುದೂ, ಅಲ್ಲಿ ಸೇರಿದ್ದ ಜನರು ಮತ್ತಷ್ಟು ಆಶ್ಚರ್ಯ ಪಟ್ಟು ನಂಬಿಯನ್ನು ಶಂಕಿಸಿದುದೂ, ನಂಬಿಗೆ ಸಿಟ್ಟು, ಬೇಸರ ಹೆಚ್ಚಾಗಿ ನಂತರ ಸ್ವಲ್ಪ ಸ್ವಲ್ಪವಾಗಿ ಪೂರ್ವಸ್ಮರಣೆ ಉಂಟಾದದ್ದೂ, ಕಡೆಗೆ ವೃದ್ಧನನ್ನು ಹಿಂಬಾಲಿಸಿಕೊಂಡು ಊರಿಗೆ ಹೋಗಿ ತಲುಪುತ್ತಲೇ ವೃದ್ಧನು ಒಂದು ಶಿವಾಲಯವನ್ನು ಹೊಕ್ಕು ಮೂಲಪ್ರತಿ ಶಿವಲಿಂಗದ ಕೆಳಗಿದೆಯೆಂದು ಹೇಳಿ ಕಣ್ಮರೆಯಾದದ್ದೂ, ಇಷ್ಟು ಹೊತ್ತಿಗೆ ನಂಬಿಗೆ ಪೂರ್ಣ ಜ್ಞಾನ ಉಂಟಾಗಿ ಶಿವನನ್ನು ನೆನಸಿಕೊಂಡು ಬಹಳವಾಗಿ ಸ್ತೋತ್ರ ಮಾಡಿದ ನಂತರ ಶಿವಪಾರ್ವತಿಯರು ಪ್ರತ್ಯಕ್ಷವಾಗಿ ಧನಸಂಪತ್ತನ್ನನುಗ್ರಹಿಸಿ ಲಗ್ನ ಮಾಡಿಕೊಂಡು ಬಹು ಕಾಲ ರಾಜ್ಯವಾಳಿದ ನಂತರ ತನ್ನಲ್ಲಿಗೆ ಬರಬೇಕೆಂದು ಹೇಳಿ ಹರಸಿದುದು ... ವರ್ಣಿಸಲ್ಪಟ್ಟಿದೆ.

ರಾಷ್ಟ್ರದ ಸಂಪತ್ತು

ರಾಷ್ಟ್ರದ ಆಡಳಿತವನ್ನು ಸುಸೂತ್ರವಾಗಿ ನಡೆಸಲು ಸಂಪತ್ತಿನ ಆಧಾರ ಅತ್ಯವಶ್ಯಕ. ಕಂದಾಯ, ತೆರಿಗೆಗಳಿಂದ

ರಾಷ್ಟ್ರದ ಸಂಪತ್ತು ಶೇಖರವಾಗುತ್ತಿತ್ತು. ಧರ್ಮಶಾಸ್ತ್ರಗಳ ಪ್ರಕಾರ ಕಂದಾಯವು ಸೂಕ್ತವಿದ್ದು ಮತ್ತು ಸಮಾನವಿದ್ದು ಕಂದಾಯ ಕೊಡುವ ಪ್ರಜೆಗಳಿಗೆ ತೃಪ್ತಿಕರವಾಗಿರಬೇಕು. ತೆರಿಗೆ ಮತ್ತು ಕಂದಾಯಗಳನ್ನು 'ಆಕರ' ಎಂಬ ಹೆಸರಿನಿಂದ ಕರೆಯುತ್ತಿದ್ದರು, ಅಂದರೆ ಉದ್ಯಾನವನದಲ್ಲಿ ಹೂವಾಡಿಗನು ಹೂಗಳನ್ನು ಮಾತ್ರ ತೆಗೆದುಕೊಂಡು ಹೇಗೆ ಮೂಲವನ್ನೇ ಕತ್ತರಿಸುವುದಿಲ್ಲವೋ ಹಾಗೆ ಸರ್ಕಾರವು ತೆರಿಗೆಗಳನ್ನು ವಿಧಿಸಬೇಕು. ರಾಜನಿಗೆ $\frac{1}{6}$ ನೇ ಭಾಗವು ಸೇರತಕ್ಕದ್ದು. ವ್ಯಾಪಾರ, ಕೈಗಾರಿಕೆಯು ನಿವ್ವಳ ಆದಾಯದ ಮೇಲೆ ಕರಗಳನ್ನು ವಿಧಿಸಬೇಕು. ಕರಗಳು ಪ್ರಜಾಸಮ್ಮತವಾಗಿರಬೇಕು. ಶಾಸ್ತ್ರಜ್ಞರು, ವಿಜ್ಞಾನಿಗಳು, ಸೈನಿಕರು ಮತ್ತು ಅಂಗವಿಕಲರು ಕರ ಕೊಡಬೇಕಿರಲಿಲ್ಲ. ಕರ ವಸೂಲಿಯಲ್ಲಿ ರಾಜನು ಪ್ರಜೆಗಳನ್ನು ಪೀಡಿಸಕೂಡದು.

ಶಾಸನಗಳಲ್ಲಿ ಅನೇಕ ರೀತಿಯ ತೆರಿಗೆಗಳ ಹೆಸರುಗಳು ಬರುತ್ತವೆ. ತೋಟ, ಕಪಿಲೆ, ಹುಲ್ಲುಗಾವಲುಗಳ ಮೇಲೆ ವ್ಯವಸಾಯ ಸುಂಕಗಳು ವಿಧಿಸಲ್ಪಡುತ್ತಿದ್ದವು; ಕುಂಬಾರ–ದೆರೆ, ಚಕ್ರಕಾಣಿಕೆ, ಮಗ್ಗದೆರೆ, ಗಾಣದೆರೆ, ಆಲೇಮನೆ ಸುಂಕಗಳು, ಕೈಗಾರಿಕಾ ಸುಂಕಗಳು; ಹೆಜ್ಜುಂಕ, ಕಿರುಕುಳ, ಮಾರ್ಗದಾಯಗಳೆಂಬುವು ವ್ಯಾಪಾರ ಸುಂಕಗಳು, ಪಡೆಕಾಣಿಕೆ ನಾಡು, ತಳವಾರಿಕೆಗಳು ಸೈನ್ಯ ಸುಂಕಗಳು, ಇದೇ ರೀತಿಯಲ್ಲಿ ಚರಸ್ಥಿರ ಆಸ್ತಿಗೆ ಸಂಬಂಧಿಸಿದ ಸುಂಕಗಳೂ, ಮಾತಾಚಾರ ತೆರಿಗೆಗಳೂ, ಕಪ್ಪಕಾಣಿಕೆಗಳೂ, ಮಠಕ್ಕೆ ಸಂಬಂಧಿಸಿದ ತೆರಿಗೆಗಳೂ ರೂಢಿಯಲ್ಲಿದ್ದವು.

ರಾಷ್ಟ್ರದ ಸಂಪತ್ತಿಗೆ ಭೂಕಂದಾಯವೇ ಮುಖ್ಯಾಧಾರವು. ಆದರೆ ಭೂಕಂದಾಯವೊಂದೇ ಆಡಳಿತ ನಡೆಸಲು ಸಾಲದುದರಿಂದ ಕೌಟಿಲ್ಯನು ಧನ ಸಂಗ್ರಹ ಮಾಡುವ ಅನೇಕ ಚತುರೋಪಾಯಗಳನ್ನು ಹೇಳಿರುವನು. ವ್ಯಾಪಾರಸ್ಥರು ನೂರಿನ ಮೇಲೆ ಶೇ. ೫ ರಿಂದ ೧೬ ರ ವರೆಗೆ ಸುಂಕ ಕೊಡಬೇಕು. ಹೀಗೆ ದೋಣಿ ಸುಂಕ, ನೀರಿನ ಸುಂಕ, ಮದ್ಯಪಾನಗಳ ಸುಂಕ, ವ್ಯಾಪಾರ ಸುಂಕ, ಖಣಿಯ ಕೆಲಸ, ಉಪ್ಪು ತಯಾರಿಕೆ, ತೋಟ ಹುಲ್ಲುಗಾವಲಿನ ಮೇಲಿನ ಸುಂಕಗಳಿಂದಲೂ ಆದಾಯ ಶೇಖರವಾಗುತ್ತಿತ್ತು. ಕೌಟಿಲ್ಯನು ಸಾರ್ವಜನಿಕ ಕಾರ್ಯಗಳಿಗಾಗಿ ಕಡ್ಡಾಯ ಕೆಲಸವನ್ನು ಹೇಳಿದ್ದಾನೆ. ತೂಕ, ಅಳತೆ ಸರಿಯಾಗಿ ಇರತಕ್ಕದ್ದೆಂದು ಎಚ್ಚರಿಕೆ ಹೇಳಿದ್ದಾನೆ. ಸಾಲ ಕೊಡಬೇಕಾದವರು ಗುಲಾಮರಂತೆ ಸೇವೆ ಮಾಡಬೇಕಾಗಿತ್ತು; ಸಾಲ ತೀರಿದ ನಂತರ ಅವರು ಸ್ವತಂತ್ರರು. ಮಕ್ಕಳಿಲ್ಲದೇ, ವಾರಸುದಾರರಿಲ್ಲದೇ ತೀರಿಕೊಂಡವರ ಭೂಮಿ ಅರಸನಿಗೆ ಸೇರುತ್ತಿತ್ತು. ಸೈನ್ಯದ ಸಂಖ್ಯೆ ಅಧಿಕವಾಗಿದ್ದರಿಂದ ಅದರ ವೆಚ್ಚಕ್ಕೆ ೫೦ ರಷ್ಟಿದ್ದರೂ ಉಳಿದ ಆದಾಯದಲ್ಲಿ ಶೇ. ೧೭ ರಷ್ಟು ಆಪದ್ಧನವನ್ನಾಗಿಡಬೇಕಾಗಿತ್ತು. ವೇತನಕ್ಕಾಗಿ $8\frac{1}{3}\%$. ರಾಜನ ಸ್ವಂತ ಖರ್ಚಿಗಾಗಿ $8\frac{1}{3}\%$. ಸಾಮಾಜಿಕ ಅಭಿವೃದ್ಧಿ ಮತ್ತು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ೧೭% ನ್ನು ರಾಜ್ಯಾದಾಯದಲ್ಲಿ ತೆಗೆದಿಡುತ್ತಿದ್ದರು. ಇಷ್ಟೊಂದು ಧನ ಸಂಪತ್ತನ್ನು ವಂತಿಗೆ ಮತ್ತು ಕಾಣಿಕೆಗಳಿಂದಲೂ, ಮತ್ತಿತರ ವಿಧಗಳಿಂದಲೂ ಶೇಖರಿಸಿ ಪ್ರಜೆಗಳ ಕ್ಷೇಮಕ್ಕಾಗಿ ಅಧಿಕ ಭಾಗವನ್ನು ವಿನಿಯೋಗಿಸುವ ಪದ್ಧತಿ ಇತ್ತು.

ಸುಂಕಗಳು ಅನೇಕ ವಿಧವಾಗಿದ್ದರೂ ತೆರಿಗೆಯ ಭಾರವು ಅಧಿಕವಾಗಿತ್ತೆಂದು ಹೇಳಲಾಗುವುದಿಲ್ಲ. ಶ್ರೀ ಹರ್ಷನ ಕಾಲಕ್ಕೆ ಬಂದಿದ್ದ ಯುವಾನ್‌ಚ್ವಾಂಗನೆಂಬ ಚೀಣಾ ಯಾತ್ರಿಕನು ತೆರಿಗೆಗಳು ಬಹಳ ಹಗುರವಾಗಿದ್ದ ವೆಂದೂ, ಪ್ರಜೆಗಳಿಗೆ ಕಿರುಕುಳವಿರಲಿಲ್ಲವೆಂದೂ ಹೇಳಿರು ವನು; ಮತ್ತು ಸರ್ಕಾರದ ನೀತಿಯು ಪ್ರಜೆಗಳ ಹಿತಕ್ಕೆ ಅನುಗುಣವಾಗಿತ್ತು; ಕುಟುಂಬಗಳನ್ನು ಲೆಕ್ಕಕ್ಕಾಗಿ ಗುರುತು ಹಚ್ಚಿಕೊಳ್ಳುವ (register) ಕಾರಣವಿರಲಿಲ್ಲ, ಮತ್ತು ವ್ಯಕ್ತಿ ಗಳನ್ನು ಕೂಲಿ ಕೆಲಸಕ್ಕೆ (ವಿಷ್ಟಿ) ಬಲಾತ್ಕರಿಸುತ್ತಿರಲಿಲ್ಲ; ಕಾಣಿಕೆ ಕೊಡುವ ಅಗತ್ಯವಿರಲಿಲ್ಲ; ಪ್ರಜೆಗಳು ಪರಂಪರಾಗತ ವಾದ ಉದ್ಯೋಗವನ್ನು ನಡೆಸಿಕೊಂಡು ಬರಲು ಮತ್ತು ಪಿತ್ರಾರ್ಜಿತ ಆಸ್ತಿಯನ್ನು ರಕ್ಷಣೆ ಮಾಡಿಕೊಳ್ಳಲು ಅನು ಕೂಲವಿತ್ತು; ವ್ಯಾಪಾರಸ್ಥರು ತಮ್ಮ ವ್ಯವಹಾರಗಳನ್ನು ಧಾನ್ಯ ರೂಪದಲ್ಲಿ ನಡೆಸುತ್ತಿದ್ದರು.

ರಾಜನು ಭೂಮಿಗೆಲ್ಲಾ ಒಡೆಯನೆಂಬ ಅಭಿಪ್ರಾಯ ಮೆಗಾಸ್ತನೀಸನು ಭಾರತಕ್ಕೆ ಬಂದಿದ್ದ ಕಾಲದಲ್ಲಿತ್ತು. ಆದರೆ ಭೂಮಿಯನ್ನು ವಂಶಪರಂಪರೆಯಿಂದ ತಮ್ಮಲ್ಲಿ ಉಳಿಸಿ ಕೊಳ್ಳುವ ಹಕ್ಕು ಪ್ರಜೆಗಳಿಗಿತ್ತು. ಕಂದಾಯ ಕಟ್ಟದಿದ್ದವರು ಮಾತ್ರ ಭೂಮಿಯನ್ನು ಬಿಡಬೇಕಾಗಿತ್ತು. ಈ ಅಭಿಪ್ರಾಯ ಗಳನ್ನು ಕೌಟಿಲ್ಯನೂ ಅಂಗೀಕರಿಸಿದ್ದಾನೆ.

ಕೆಲವು ಸಂದರ್ಭಗಳಲ್ಲಿ ರಾಜನ ಅಧಿಕಾರಿಗಳ ಹಿಂಸೆ ಯನ್ನು ತಾಳಲಾರದೆ ರೈತರು ಭೂಮಿಗಳನ್ನು ವ್ಯವಸಾಯ ಮಾಡದೆ ಹೊರಟುಹೋಗುತ್ತಿದ್ದರು. ಶ್ರೀ ಹರ್ಷನ ಕಾಲದಲ್ಲಿ

ಭೋಗಿಕ ಅಥವಾ ಭೋಗಪತಿ ಎಂಬ ಅಧಿಕಾರಿಯು ರಾಜ್ಯಾದಾಯದ ಪಾಲನ್ನು ಧಾನ್ಯರೂಪದಲ್ಲಿ ಶೇಖರಿಸುವಾಗ ಚಾಟಭಟರೆಂಬ ಸೈನಿಕ ಅಧಿಕಾರಿಗಳು ರೈತರಿಗೆ ಉಪಟಳವನ್ನು ಕೊಡುತ್ತಿದ್ದರು; ವಿಚಾರ ತಿಳಿದನಂತರ ರಾಜನು ರೈತರನ್ನು ಕರೆಯಿಸಿ ವಿಚಾರಣೆ ಮಾಡಿ ಅಪರಾಧಿಗಳಾದ ಅಧಿಕಾರಿಗಳನ್ನು ದಂಡಿಸಿ ಪುನಃ ಅವರು ವ್ಯವಸಾಯವನ್ನು ಆರಂಭಿಸುವಂತೆ ವ್ಯವಸ್ಥೆ ಮಾಡಿದನೆಂದು ತಿಳಿದುಬರುತ್ತದೆ.

ಕಂದಾಯ ಮತ್ತು ತರಿಗೆಗಳನ್ನು ಧನ ಮತ್ತು ಧಾನ್ಯರೂಪದಲ್ಲಿ ವಸೂಲುಮಾಡುವ ಪದ್ಧತಿಯಿತ್ತು. ಧಾನ್ಯವನ್ನು ಕೋಷ್ಠಾಗಾರಗಳಲ್ಲಿ ಸಂಗ್ರಹಿಸಿ ಕ್ಷಾಮ ನಿವಾರಣೆಗೂ, ರೈತನ ಬಿತ್ತನೆ ಕೆಲಸಕ್ಕೂ, ಧರ್ಮಕಾರ್ಯಗಳಿಗೂ ಉಪಯೋಗಿಸುತ್ತಿದ್ದರು. ಶ್ರೀ ಹರ್ಷನು ರಾಜ್ಯದ ಆದಾಯವನ್ನು ೪ ಭಾಗ ಮಾಡಿ ಒಂದನ್ನು ಸರ್ಕಾರದ ಖರ್ಚಿಗೂ, ಎರಡನೆ ಭಾಗವನ್ನು ಅಧಿಕಾರಿಗಳ ವೇತನಗಳಿಗೂ, ಮೂರನೆ ಭಾಗವನ್ನು ಪಂಡಿತರ ಪೋಷಣೆಗೂ ಉಳಿದ ೪ ನೆ ಭಾಗವನ್ನು ಧರ್ಮ ಕಾರ್ಯಗಳಿಗಾಗಿಯೂ ಉಪಯೋಗಿಸುತ್ತಿದ್ದನೆಂದು ಯುವಾನ್‌ಚ್ವಾಂಗನು ತಿಳಿಸಿದ್ದಾನೆ.

ಸೈನ್ಯ, ನೌಕಾಬಲ, ಅಂತರ ರಾಜ್ಯ ವ್ಯವಹಾರಗಳು, ರಾಜಮಂಡಲ ಸಿದ್ಧಾಂತ.

ರಾಜ್ಯ ರಕ್ಷಣೆಯ ಸಲುವಾಗಿ ಪ್ರಾಚೀನ ಕಾಲದಿಂದಲೂ ಬಲವಾದ ಮತ್ತು ಅಪಾರ ಪ್ರಮಾಣದ ಸೈನ್ಯ ವ್ಯವಸ್ಥೆಯ ಅಗತ್ಯವಿತ್ತು. ಭಾರತೀಯರ ಯುದ್ಧ ರೀತಿ, ಸೈನಿಕರು

ಉಪಯೋಗಿಸುತ್ತಿದ್ದ ಶಸ್ತ್ರಗಳು, ಅವರ ಸಮವಸ್ತ್ರ ಮತ್ತು ಯುದ್ಧಸಾಮಗ್ರಿಗಳ ವರ್ಣನೆಯನ್ನು ಹೆರಡೋಟಸ್ ಎಂಬ ಗ್ರೀಕರ ಇತಿಹಾಸ ಶಾಸ್ತ್ರಜ್ಞನ ಗ್ರಂಥದಲ್ಲಿ ಕಾಣಬಹುದು; ಪರ್ಶಿಯಾ ಮತ್ತು ಗ್ರೀಸಿನ ನಡುವೆ ಕ್ರಿ. ಪೂ. ೫ನೆ ಶತಕದಲ್ಲಿ ಉಂಟಾದ ಕದನಗಳಲ್ಲಿ ಪರ್ಶಿಯನ್ನರ ಪಕ್ಷದಲ್ಲಿ ಭಾರತೀಯ ಬಿಲ್ಲುಗಾರರು ಭಾಗವಹಿಸಿದರೆಂದು ಹೆರಡೋಟಸನು ಹೇಳುತ್ತಾನೆ. ಈ ಕದನಗಳಲ್ಲಿ ಮ್ಯಾರಥಾನ್, ಪ್ಲಾಟಿಯಾ ಮತ್ತು ಸೇಲಾಮಿಸ್ ಪ್ರಮುಖ ಕದನಗಳು. ಡೇರಿಯಸ್ ಎಂಬ ಪರ್ಶಿಯಾ ದೇಶದ ಅರಸನ ತರುವಾಯ ಆಳ್ವಿಕೆಗೆ ಬಂದ ಖಿಷ್ಯಾರ್ಶಾನ್ ಅಥವಾ ಕ್ಸರ್ಸ್ಸೀಸನ ಕಾಲದಲ್ಲಿ ಗ್ರೀಸಿನೊಡನೆ ಯುದ್ಧವುಂಟಾಯಿತು. ಈ ಯುದ್ಧಗಳಲ್ಲಿ ಭಾರತೀಯ ಸೈನಿಕರು ಅರಳೆಯ ಸಮವಸ್ತ್ರವನ್ನು ಧರಿಸಿಕೊಂಡು ಬೆತ್ತದಿಂದ ಮಾಡಿದ ಬಿಲ್ಲುಗಳನ್ನು ಮತ್ತು ಕಬ್ಬಿಣದ ಮೊನೆಯುಳ್ಳ ಬಾಣಗಳನ್ನೂ ಉಪಯೋಗಿಸಿ ಪರ್ಶಿಯನ್ನರ ಪಕ್ಷದಲ್ಲಿ ಯುದ್ಧ ಮಾಡಿದರೆಂದು ಹೆರಡೋಟಸನು ತಿಳಿಸುತ್ತಾನೆ.

ಪುರಾತನ ಕಾಲದಿಂದಲೂ, ಸೈನ್ಯವನ್ನು ಸಾಂಪ್ರದಾಯಿಕವಾಗಿ, ರಥ, ಹಸ್ತಿ, ಅಶ್ವಪದಾತಿ ಎಂಬ ಚತುರಂಗ ಬಲವನ್ನಾಗಿ ವ್ಯವಸ್ಥೆ ಮಾಡುವ ಪದ್ಧತಿಯಿತ್ತು. ಕ್ರಿ. ಪೂ. ೪ನೆ ಶತಮಾನದಿಂದೀಚೆಗೆ ರಥಗಳನ್ನು ಹೆಚ್ಚಾಗಿ ಬಳಸುತ್ತಿರಲಿಲ್ಲ. ಕೌಟಿಲ್ಯನು ಹೇಳಿರುವಂತೆ, ಸೈನಿಕರು ರಣಾಂಗಣದಲ್ಲಿ ಮಡಿದರೆ ಸದ್ಗತಿಯನ್ನೂ, ಬದುಕಿದರೆ ರಾಜ್ಯಲಕ್ಷ್ಮಿಯನ್ನೂ ಪಡೆಯುವರು; ಸ್ವಾಮಿಯ ಋಣವನ್ನು ತೀರಿಸುವುದು ಪ್ರತಿಯೊಬ್ಬ ಸೈನಿಕನ ಕರ್ತವ್ಯ. ಯುದ್ಧಾರಂಭಕ್ಕೆ

ಮೊದಲು ಪುರೋಹಿತನು ಸೈನಿಕರಿಗೆ, ರಾಜ್ಯರಕ್ಷಣೆಗಾಗಿ ಆತ್ಮಸಾಕ್ಷಿಯಾಗಿ ಯುದ್ಧ ಮಾಡಬೇಕೆಂದು ಬೋಧನೆ ಮಾಡುತ್ತಿದ್ದನು. ಯುದ್ಧದಲ್ಲಿ ಮಡಿದು ವೀರಸ್ವರ್ಗ ಹೊಂದಿದವರ ನೆನಪಿಗಾಗಿ ವೀರಗಲ್ಲುಗಳನ್ನು ನಟ್ಟು ಪೂಜಿಸುವ ಪದ್ಧತಿಯಿತ್ತು.

ಕ್ರಿ. ಶ. ೮ನೆ ಶತಮಾನದ ತರುವಾಯ ಸೈನಿಕ ಬಲವನ್ನು ೪ ವಿಧವಾಗಿ ವಿಂಗಡಿಸುತ್ತಿದ್ದದ್ದು ಗೋಚರವಾಗುತ್ತದೆ. ಮೌಳಿ (ರಾಜನ ಸ್ವಂತ ಸೇನೆ), ಭೃತ (ವೇತನ ಸೇವಕರು), ಶ್ರೇಣಿ (ಗಣರಾಜ್ಯ ಸೇನೆ), ಮತ್ತು ಸಾಮಂತರ ಸೇನೆ. ಸೈನ್ಯಕ್ಕೆ ಸೇರಬಯಸುವ ಯುವಕರನ್ನು ಮೊದಲು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಸೈನಿಕರು ಯುದ್ಧಮಾಡುವುದಕ್ಕಾಗಿ ಯುದ್ಧ ಶಿಕ್ಷಣ, ಅಂಗಸಾಧನೆ ಮತ್ತು ಸಾಮಗ್ರಿಗಳ ಬಳಕೆಯನ್ನು ತಿಳಿಸುತ್ತಿದ್ದರು. ಬಿಲ್ಲು ಬಾಣ, ಕತ್ತಿ, ಭರ್ಜಿ, ತನುತ್ರಾಣ, ಶಿರಸ್ತ್ರಾಣ ಮೊದಲಾದ ಯುದ್ಧ ಸಾಮಗ್ರಿಗಳು ಉಪಯೋಗದಲ್ಲಿದ್ದವು. ಕುದುರೆಗಳು ಪರದೇಶದಿಂದ ಬರಬೇಕಾಗಿದ್ದರಿಂದ ಅಶ್ವಬಲ ಕಡಿಮೆಯಿತ್ತು. ಆನೆಗಳನ್ನು ಪಳಗಿಸಿ ಕೋಟೆಗಳನ್ನು ಭೇದಿಸಲು ಉಪಯೋಗಿಸುತ್ತಿದ್ದರು. ಗುಸ್ತಾನ ಒಪರ್ಟನೆಂಬವನು ಭಾಷಾಂತರಿಸಿರುವ ಕೆಲವು ಪ್ರಾಚೀನ ಗ್ರಂಥಗಳಲ್ಲಿ ಮದ್ದು ಗುಂಡುಗಳ ಹಾಗೂ ವಿಷವಾಯು ಇತ್ಯಾದಿ ಪ್ರಯೋಗಗಳ ವರ್ಣನೆ ದೊರೆಯುವುದರಿಂದ ಅವುಗಳ ಉಪಯೋಗವನ್ನು ಸೈನಿಕರು ತಿಳಿದಿದ್ದರೆಂದು ಹೇಳಬಹುದು.

ಸೈನ್ಯಕ್ಕೆ ಅಧಿಕವಾಗಿ ಸಹಾಯವಾಗುವಂತೆ ನೌಕಾ ಬಲವೂ ಉಪಯೋಗದಲ್ಲಿತ್ತೆಂದು ತಿಳಿದುಬರುತ್ತದೆ. ಮೌರ್ಯ, ಗುಪ್ತ, ಸಾತವಾಹನ ಮತ್ತು ಪಾಂಡ್ಯರ ರಾಜ್ಯಗಳಲ್ಲಿ ನೌಕಾ ಬಲವು ವ್ಯವಸ್ಥೆಯಲ್ಲಿತ್ತು. ನೌಕಾ ಸಹಾಯದಿಂದ ಯುದ್ಧ ಮಾಡಿ ಆಕ್ರಮಣ ನೀತಿಗಿಂತ ಹೆಚ್ಚಾಗಿ, ಭಾರತೀಯರು, ಪ್ರಪಂಚದ ನಾನಾ ದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದರೆಂದು ಸ್ಪಷ್ಟವಾಗಿ ಹೇಳಬಹುದು. ದೂರವಿರುವ ದ್ವೀಪಗಳಲ್ಲಿ ಭಾರತೀಯರು ನೆಲೆಸಿ ಭಾರತೀಯ ಸಂಸ್ಕೃತಿಯನ್ನು ಪ್ರಚಾರ ಪಡಿಸಲು ನೌಕೆಯು ಸಹಾಯ ಮಾಡಿತು. ಭೋಜ ರಾಜನು ರಚಿಸಿರುವ 'ಸಮರಾಂಗಣ ಸೂತ್ರಧಾರ' ಎಂಬ ಗ್ರಂಥವು ಹಡಗುಗಳ ಉಪಯೋಗದ ಸೂಚನೆಯನ್ನು ತಿಳಿಸುತ್ತದೆ.

ಪ್ರಾಚೀನ ಭಾರತದ ಗ್ರಂಥಗಳಲ್ಲಿ ಯುದ್ಧ ನೀತಿ, ವ್ಯೂಹರಚನೆ, ಮಿತ್ರಾಮಿತ್ರರ ಬಲಾಬಲಗಳ ಅರಿವು, ಕಂಟಕ ಶೋಧನೆ (ಅಪರಾಧಿಗಳನ್ನು ವಿಚಾರಣೆ ಮಾಡುವ ನ್ಯಾಯಾಲಯ) ಮೊದಲಾದ ವಿಷಯಗಳು ಶಾಸ್ತ್ರೀಯ ರೀತಿಯಲ್ಲಿ ವರ್ಣಿಸಲ್ಪಟ್ಟಿವೆ.

ಈ ಸಂದರ್ಭದಲ್ಲಿ, ರಾಜಮಂಡಲ, ತತ್ವಪ್ರಸ್ತಾಪವು ಬರುತ್ತದೆ. ಈ ತತ್ವವನ್ನು ಹೀಗೆ ವಿವರಿಸಬಹುದು. ಪ್ರಾಚೀನ ರಾಜ್ಯಶಾಸ್ತ್ರಜ್ಞರ ಪ್ರಕಾರ ಯುದ್ಧ ಮತ್ತು ಆಕ್ರಮಣ ಪೂರ್ಣವಾಗಿ ವರ್ಜ್ಯ ಮಾಡಲು ಸಾಧ್ಯವಿಲ್ಲವಾದ ಕಾರಣ ಇದಕ್ಕಾಗಿ ನೆರೆಹೊರೆಯ ರಾಜ್ಯಗಳಲ್ಲಿ ಪ್ರಭುಶಕ್ತಿಯು ಸಮಾನವಾಗಿರುವಂತೆ ಒಬ್ಬ ಪ್ರಬಲ ಅರಸನು ಸಣ್ಣ ಸಣ್ಣ

ಮತ್ತು ದುರ್ಬಲ ರಾಜ್ಯಗಳನ್ನು ತನ್ನ ಹತೋಟಿಯಲ್ಲಿರಿಸಿಕೊಂಡು ತಾನು ಏಕಚಕ್ರಾಧಿಪತ್ಯವನ್ನು ಸ್ಥಾಪಿಸುವ ನೀತಿಗೆ ಮಂಡಲ ಸಿದ್ಧಾಂತವೆಂದು ಹೆಸರು. ಆಧುನಿಕ ರಾಷ್ಟ್ರಗಳಲ್ಲಿಯೂ ಈ ವಿಧವಾದ ನೀತಿ ಆಚರಣೆಯಲ್ಲಿರುತ್ತದೆ. ಈ ಸಿದ್ಧಾಂತದಲ್ಲಿ ಶತ್ರುವಿಗೆ (ಅರಿ) ಮತ್ತು ಮಿತ್ರರಿಗೆ ಕ್ರಮವಾಗಿ ಬರುವವರು ಅರಿಮಿತ್ರ, ಮಿತ್ರಾಮಿತ್ರ ಮತ್ತು ಅರಿಮಿತ್ರಾಮಿತ್ರ. ನೆರೆಹೊರೆಯ ರಾಜ್ಯಗಳು ಶತ್ರುಗಳಾಗಿದ್ದಾಗ ಒಬ್ಬನು ತನ್ನ 'ಸ್ವಮಂಡಲಮಂ ಸುವಿಹಿತಮಾಗಿ ಮಾಡಿ ಪರಮಂಡಲಗಳಂ ಜಯಿಸಲೋಸುಗ ಮಂಡಲಮನೆ' ವಿಚಾರಿಸುವ ಸಂದರ್ಭದಲ್ಲಿ ಮಂಡಲ ಶೋಧನೆಯನ್ನಾರಂಭಿಸುತ್ತಾನೆ.

ದಿಗ್ವಿಜಯವನ್ನು ಸಾಧಿಸಲು ಹೊರಟ ಪ್ರಬಲನಾದ ಅರಸನಿಗೆ ಬೆಂಬಲಿಗರು ನಾಲ್ವರು :– ಈ ಅರಸನ ಹಿಂಬಲದಲ್ಲಿ ಅತ್ಯಂತ ಸಮೀಪವಿರುವ ಅರಸನು ಪಾರ್ಷ್ಣಿಗ್ರಾಹನು (ಯುದ್ಧದಲ್ಲಿ ಬೆಂಬಲವಾಗುವವನು). ಈತನಿಗೆ ಮುಂದೆ ಆಕ್ರಂದನು (ಪಾರ್ಷ್ಣಿಗ್ರಾಹಿಯ ಮಿತ್ರನು) ನಂತರ ಪಾರ್ಷ್ಣಿಗ್ರಾಹಿಯ ಸಾರನು (ಪಾರ್ಷ್ಣಿಗ್ರಾಹಿಯ ವೈರಿಯ ಮಿತ್ರನು), ಈತನ ನಂತರ ಆಕ್ರಂದಸಾರನು (ಪಾರ್ಷ್ಣಿಗ್ರಾಹಿಯ ಮುಂಬಲವಾಗಿರುವ ಮಿತ್ರನ ಮಿತ್ರನು).

ಆಕ್ರಮಣ ನೀತಿಯಲ್ಲಿ ಅಭಿರುಚಿಯಿಲ್ಲದೆ ತನ್ನಷ್ಟಕ್ಕೆ ತಾನು ಇರುವ ಅರಸನಿಗೆ 'ಮಧ್ಯಮ' ಎಂದು ಹೆಸರು. ಎಲ್ಲಾ ಸಾಮರ್ಥ್ಯ ಮತ್ತು ಬಲವಿದ್ದು ದಿಗ್ವಿಜಯಕ್ಕೆ ಹೊರಟ

ಅರಸನ ಸಮಾನ ಮಟ್ಟದಲ್ಲಿದ್ದ ಅರಸನಿಗೆ ' ಉದಾಸೀನ ' ಎಂದು ಹೆಸರು. ಮಂಡಲದ ೧೨ ನೆಯ ಅರಸನೇ ವಿಜಿಗೀಷುಃ ಅಂದರೆ ದಿಗ್ವಿಜಯಮಾಡಿ ಸಾರ್ವಭೌಮನೆನಿಸಿಕೊಳ್ಳುವವನು.

ಇದೇ ರೀತಿಯಲ್ಲಿ ಯುದ್ಧಕ್ಕೆ ಹೊರಡುವಾಗ ಸಿದ್ಧತೆ, ದುರ್ಗಪ್ರಯೋಜನ, ಕೋಶವಿಚಾರ, ಬಲವಿಚಾರ, ಮಿತ್ರವಿಚಾರ, ದೂತಯೋಗ ಮತ್ತು ಪ್ರಕೃತಿಗಳ ವ್ಯಸನದ (ರಾಜ್ಯದ ದುರ್ಬಲತೆಗಳು–ಕುಂದುಕೊರತೆಗಳು) ಬಗ್ಗೆ ಪ್ರಾಚೀನ ಗ್ರಂಥಗಳು ಅಪಾರ ಜ್ಞಾನವನ್ನು ಕೊಡುತ್ತವೆ.

೪. ಕರ್ನಾಟಕದಲ್ಲಿ ರಾಜ್ಯಪದ್ಧತಿ

ಕರ್ನಾಟಕದಲ್ಲಿಯೂ ರಾಜ್ಯದ ಅಧಿಕಾರವೆಲ್ಲವೂ ಅರಸನಲ್ಲೇ ಕೇಂದ್ರೀಕೃತವಾಗಿ ಸಹಾಯಕ ಸಿಬ್ಬಂದಿಯವರಿಂದ ಆಡಳಿತ ನಡೆಯುತ್ತಿತ್ತು. ಕ್ರಿ. ಪೂ. ೧ನೆ ಶತಮಾನದ ಮೊದಲು ಸಣ್ಣ ಸಣ್ಣ ರಾಜ್ಯಗಳೇರ್ಪಟ್ಟಿದ್ದವು. ಶಾತವಾಹನರ ರಾಜ್ಯಸ್ಥಾಪನೆಯ ನಂತರ ವಿಶಾಲವಾದ ಸಾಮ್ರಾಜ್ಯಗಳು ಸ್ಥಾಪಿಸಲ್ಪಟ್ಟವು. ಇಂತಹ ಸಾಮ್ರಾಜ್ಯವನ್ನು ಕಟ್ಟಿದ ಅರಸರು ಸಣ್ಣ ರಾಜ್ಯಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದರೂ ಅವುಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿರಲಿಲ್ಲ. ಸಣ್ಣ ರಾಜ್ಯಗಳು ಅರಸನಿಗೆ ವಿಧೇಯತೆಯಿಂದ ನಡೆದುಕೊಂಡರೂ ಕೇಂದ್ರ ಸರ್ಕಾರವು ದುರ್ಬಲವಾದ ಸಂದರ್ಭವನ್ನು ನೋಡಿಕೊಂಡು ತಾವು ಸ್ವತಂತ್ರವಾಗಲು ಸನ್ನಾಹ ಮಾಡುತ್ತಿದ್ದವು. ಕೇಂದ್ರ ಸರ್ಕಾರವು ಪ್ರಬಲವಾಗಿರುವ ವರೆಗೆ ಮಾತ್ರ ಸಣ್ಣಪುಟ್ಟ ರಾಜರು ಸಾಮಂತರಾಜರೆಂದೆನಿಸಿಕೊಂಡು ಕಪ್ಪ, ಕಾಣಿಕೆಗಳನ್ನು ಕೊಡಲು ಒಪ್ಪಿಕೊಳ್ಳುತ್ತಿದ್ದರು. ಬಾದಾಮಿ ಚಾಲುಕ್ಯರ ಕಾಲದಿಂದ ಸ್ಥಾಪಿಸಲ್ಪಟ್ಟ ದೊಡ್ಡ ದೊಡ್ಡ ರಾಜ್ಯಗಳಲ್ಲಿ ಉತ್ತಮ ರಾಜ್ಯಪದ್ಧತಿಗಳ ಉದಯವಾಯಿತು. ದೊಡ್ಡ ರಾಜ್ಯದ ನಿರ್ಮಾಣವಾದ ನಂತರ ಆ ರಾಜ್ಯದಲ್ಲಿ ಮೊದಲೇ ಆಳುತ್ತಿದ್ದ ಸ್ವತಂತ್ರ ರಾಜರುಗಳು ಒಟ್ಟಾಗಿ ಕಲೆತು ಸಾಮ್ರಾಟನಿಗೆ ಸಹಕರಿಸಿ ಹೊಸ ರಾಜ್ಯವನ್ನು ಭದ್ರಪಡಿಸುತ್ತಿದ್ದರು; ೨ನೆ ಪುಲಕೇಶಿ

ಮತ್ತು ಅಮೋಘವರ್ಷ–ಇವರು ಸ್ಥಾಪಿಸಿದ ಸಾಮ್ರಾಜ್ಯಗಳು ನಿದರ್ಶನಗಳಾಗಿವೆ.

ಅರಸನು ಎಷ್ಟೇ ಪ್ರಬಲನಾಗಿದ್ದರೂ ಆತನ ಆಳ್ವಿಕೆಯು ಸ್ವೇಚ್ಛಾಪ್ರವೃತ್ತಿಗೆ ಒಳಪಟ್ಟಿರಲಿಲ್ಲ. ರಾಜಕೀಯ ಮತ್ತು ಸಾಮಾಜಿಕ ಪದ್ಧತಿಗಳು, ಧರ್ಮಶಾಸ್ತ್ರಗಳು, ಜನಾಭಿಪ್ರಾಯ––ಇವುಗಳ ಅರಿವಿನಿಂದ ರಾಜನ ಅಧಿಕಾರವು ನಿಯಂತ್ರಣದಲ್ಲಿತ್ತು. ದುಷ್ಟ ನಿಗ್ರಹ ಮತ್ತು ಶಿಷ್ಟಪರಿಪಾಲನೆ ಅರಸನ ಅತ್ಯಂತ ಮುಖ್ಯ ಕರ್ತವ್ಯವಾಗಿತ್ತು. ಅರಸರು ಶೌರ್ಯ, ಸತ್ಯ, ದಾನ, ಕ್ಷಮಾ ಮೊದಲಾದ ಗುಣಗಳಿಂದ ತೇಜೋವೀರ್ಯರಾಗಿದ್ದರು. ಸಾಮಂತರಾಜರು ಮತ್ತು ಇತರ ಅಧಿಕಾರಿಗಳೂ ಸಹ ಅರಸನ ಆದರ್ಶಗಳನ್ನೇ ಅನುಸರಿಸುತ್ತಿದ್ದರು.

ರಾಜ್ಯವು ವಿಶಾಲವಾಗಿದ್ದರಿಂದ ಆಡಳಿತದ ಅನುಕೂಲಕ್ಕೆ ಸಣ್ಣ ಸಣ್ಣ ಭಾಗಗಳನ್ನಾಗಿ ವಿಂಗಡಿಸಿದ್ದರು. ಈ ಭಾಗಗಳಿಗೆ ನಾಡು, ಮಂಡಲ, ವಿಷಯ, ಎಂಬ ಹೆಸರಿವೆ. ಪ್ರತಿಯೊಂದು ಭಾಗಗಳಲ್ಲಿ ಸಮಾವೇಶಗೊಂಡ ಗ್ರಾಮಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸಲು ಆ ಭಾಗಗಳ ಹೆಸರುಗಳ ಮುಂದೆ ಸಂಖ್ಯಾವಾಚಕ ಪದಗಳನ್ನು ಸೇರಿಸುತ್ತಿದ್ದರು. ಗಂಗವಾಡಿ ೯೬,೦೦೦; ಬನವಾಸಿ ೧೨,೦೦೦; ನೊಳಂಬವಾಡಿ ೩೨,೦೦೦; ಶಂತಲಿಗೆ ೧೦೦೦; ಮುಂತಾದವು.

ಕರ್ನಾಟಕ ರಾಜ್ಯಗಳಲ್ಲಿನ ಪ್ರಜೆಗಳ ವೀರವೃತ್ತಿಯ ವಿಚಾರವಾಗಿ ಹಲವಾರು ಉಲ್ಲೇಖಗಳಿವೆ. ಬಾದಾಮಿಯಲ್ಲಿ ದೊರೆತಿರುವ ಕಪ್ಪೆ ಅರಭಟ್ಟನಿಗೆ ಸಂಬಂಧಪಟ್ಟ

ಒಂದು ಶಿಲಾಲೇಖನವು ಈ ರೀತಿ ತಿಳಿಸುತ್ತದೆ:– “ ಸಾಧುಗೆ ಸಾಧು. ಮಾಧುರ್ಯಂಗೆ ಮಾಧುರ್ಯಂ । ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್ ॥” ಕ್ರಿ. ಶ. ೬೪೧ ರಲ್ಲಿ ಚಾಲುಕ್ಯರ ರಾಜ್ಯದಲ್ಲಿ ಸಂಚಾರಮಾಡಿದ ಚೀನಾಯಾತ್ರಿಕ ಯುವಾನ್ ಚ್ವಾಂಗನ ಬರವಣಿಗೆಯಂತೂ ಸರ್ವರಿಗೂ ವಿದಿತವಾಗಿದೆ. ಈತನ ವರ್ಣನೆಯ ಕೆಲ ಭಾಗವನ್ನು ಉದಹರಿಸುವುದು ಯೋಗ್ಯವೆನಿಸುತ್ತದೆ-- ದೇಶವು ಫಲವತ್ತಾಗಿವೆ; ವ್ಯವಸಾಯವು ಕ್ರಮವಾಗಿ ನಡೆಯುತ್ತಿದೆ; ಕರ್ನಾಟಕದ ಜನರು ಕೆಚ್ಚಿನ ಸ್ವಭಾವವುಳ್ಳವರು; ಯುದ್ಧ ಮಾಡುವುದರಲ್ಲಿ ಉತ್ಸಾಹಿಗಳು; ಉಪಕಾರ ಮಾಡಿದವರಿಗೆ ಋಣಿಗಳು; ತಪ್ಪು ಮಾಡಿದವರನ್ನು ಶಿಕ್ಷಿಸುತ್ತಿದ್ದರು; ನಿಸ್ಸಹಾಯಕರಿಗೂ, ಕಷ್ಟದಲ್ಲಿರುವವರಿಗೂ ತಾವು ತ್ಯಾಗಮಾಡಿಯಾದರೂ ಸಹಾಯ ಮಾಡುವರು; ಅಪಮಾನ ಮಾಡಿದವರನ್ನು ಸದೆಬಡಿಯುತ್ತಿದ್ದರು: ಯುದ್ಧಕ್ಕೆ ಸನ್ನದ್ಧರಾಗಿ ಹೋಗುತ್ತಿದ್ದ ಸೈನಿಕರು ಉನ್ಮತ್ತರಾಗಿ ಹೋಗುತ್ತಿದ್ದರು; ಯುದ್ಧದಲ್ಲಿ ಆನೆಗಳಿಗೆ ಮದ್ಯ ಕುಡಿಸಿ ಉಪಯೋಗಿಸುತ್ತಿದ್ದರು. ಹೇಡಿಗಳಂತೆ ರಣರಂಗದಿಂದ ಹಿಂದಕ್ಕೆ ಬರುತ್ತಿರಲಿಲ್ಲ; ಇವರ ಅರಸನಾದ ೨ನೆ ಪುಲಕೇಶಿಯು ಪರಾಕ್ರಮಿಯೆನಿಸಿದ್ದ ಕಾರಣ ನೆರೆಯ ರಾಜರುಗಳನ್ನು ಧಿಕ್ಕರಿಸುವಂತಿದ್ದನು; ಆದರೆ ಆತನ ಅತ್ಯುತ್ತಮ ಆಡಳಿತ ನೀತಿಯು ಇಡೀ ರಾಜ್ಯದಲ್ಲೆಲ್ಲಾ ಪ್ರೀತಿ ವಿಶ್ವಾಸಗಳಿಸಿತ್ತು; ಪ್ರಜೆಗಳೂ, ಸಾಮಂತರೂ ಒಮ್ಮನಸ್ಸಿನಿಂದಲೂ ಸಂಪೂರ್ಣ ವಿಧೇಯತೆಯಿಂದಲೂ ಸೇವೆ ಸಲ್ಲಿಸುತ್ತಿದ್ದರು.

ಕರ್ನಾಟಕದ ಶಾಸನಗಳಲ್ಲಿ ರಾಜ್ಯದ ಅಧಿಕಾರಿಗಳ ಹೆಸರುಗಳು, ಅವರು ಹೊಂದಿರಬೇಕಾದ ಅರ್ಹತೆಗಳು ಮತ್ತು ಅವರ ಕರ್ತವ್ಯಗಳು ಸೂಚಿಸಲ್ಪಟ್ಟಿವೆ. ಕದಂಬರಲ್ಲಿ ಮನೆವೆರ್ಗಡೆ, ತಂತ್ರಪಾಲಕ, ಪ್ರಧಾನ, ಆಪ್ತಸೇವಕ. ರಹಸ್ಯಾಧಿಕೃತ ಎಂಬ ಐವರು ಸಚಿವರ ಮಂತ್ರಿಮಂಡಲ ವಿತ್ತು. ಗಂಗರಲ್ಲಿ, ಮಹಾಪ್ರಧಾನ, ದಂಡನಾಯಕ, ಸರ್ವಾಧಿಕಾರಿ, ಸಂಧಿವಿಗ್ರಾಹಿ ಎಂಬ ಪ್ರಮುಖ ಅಧಿಕಾರಿ ಗಳಿದ್ದರು. ಇವರಲ್ಲದೇ ಮಹಾಪಸಾಯಿತ, ಸೆಜ್ಜೆವಳ, ಪಡಪವಳ, ರಾಯಸೂತ್ರಧಾರಿ, ರಹಸ್ಯಾಧಿಕೃತ, ಅಂತಃ ಪುರಾಧ್ಯಕ್ಷ, ಕರಿತುರಗ ಪೆರ್ಗಡೆ, ಶ್ರೀಕರಣ, ಮನೆವೆರ್ಗಡೆ ಧರ್ಮಾಧಿಕಾರಿ, ಲೇಖಕ ಎಂಬ ಮುಖ್ಯ ಅಧಿಕಾರಿಗಳಿದ್ದರು. ಈ ಅಧಿಕಾರಿಗಳೆಲ್ಲರೂ ಕೌಟಿಲ್ಯನು ಹೇಳಿರುವ ಅರ್ಹತೆ ಗಳನ್ನೇ ಪಡೆದಿರಬೇಕಾಗಿತ್ತು; ಸೇನಾಪತಿಗೆ ಮಾತ್ರ ಹೆಚ್ಚಿನ ಅರ್ಹತೆಗಳಿರಬೇಕಾದ ಅಗತ್ಯವಿತ್ತು; ಈತನನ್ನು ದಂಡ ನಾಯಕ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ರಾಜ್ಯದ ಮಂತ್ರಿಗಳೆಲ್ಲರೂ ಯುದ್ಧ ಶಿಕ್ಷಣ ಹೊಂದಿರಬೇಕಾಗಿತ್ತು. ಯುದ್ಧದ ವೇಳೆಯಲ್ಲಿ ಇವರು ಸೈನ್ಯವನ್ನು ಸಿದ್ಧ ಪಡಿಸಿ ಕೊಂಡು ಯುದ್ಧಕ್ಕೆ ಹೊರಡುತ್ತಿದ್ದರು.

ಆಡಳಿತದಲ್ಲಿ ಪ್ರಜೆಗಳೂ ಭಾಗವಹಿಸಿ ಸರ್ಕಾರಕ್ಕೆ ಸಹಾಯವನ್ನೊದಗಿಸುವುದು ಕರ್ನಾಟಕ ರಾಜ್ಯಪದ್ಧತಿಯ ಮತ್ತೊಂದು ಮುಖ್ಯಾಂಶವಾಗಿದೆ. ಗ್ರಾಮಗಳಲ್ಲಿ ಪಂಚಾಯಿತ ಗಳು ಗ್ರಾಮದ ಆಡಳಿತದ ಆಧಾರಸ್ತಂಭವೆನಿಸಿದ್ದವು. ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ಸಭೆಯಿತ್ತು.

ಕುಟುಂಬದ ಎಲ್ಲಾ ಗೃಹಸ್ಥರೂ ಗ್ರಾಮಸಭೆಯ ಸದಸ್ಯರಿರುತ್ತಿದ್ದರು. ಕೇಂದ್ರ ಸರ್ಕಾರವು ಎಷ್ಟೇ ಪ್ರಬಲವಾಗಿದ್ದರೂ ಗ್ರಾಮ ಸಭೆಗಳಿಗೆ ಗ್ರಾಮಾಡಳಿತದಲ್ಲಿ ಸ್ವಾತಂತ್ರ್ಯವಿತ್ತು. ಗ್ರಾಮದ ಕಲ್ಯಾಣ ಸಾಧನೆಯೇ ಈ ಸಭೆಗಳ ಮುಖ್ಯಗುರಿ. ಶಾಲೆಗಳನ್ನು ತೆರೆಯುವುದು, ಧರ್ಮಶಾಲೆಗಳ ಸ್ಥಾಪನೆ, ದೇವಾಲಯಗಳ ಆಸ್ತಿಯ ಆಡಳಿತವನ್ನು ನೋಡಿಕೊಳ್ಳುವುದು, ಗ್ರಾಮದ ಕೆರೆಗಳ ಮೇಲ್ವಿಚಾರಣೆ ನಡೆಸುವುದು, ಗ್ರಾಮನಿವಾಸಿಗಳಿಂದ ತೆರಿಗೆಯ ರೂಪದಲ್ಲಿ ಧನ ಸಂಗ್ರಹಿಸಿ ಸಾರ್ವಜನಿಕ ಕಾರ್ಯಗಳಿಗಾಗಿ ವಿನಿಯೋಗಿಸುವುದು – ಇವು ಗ್ರಾಮಸಭೆಯ ಮುಖ್ಯ ಕಾರ್ಯಗಳಾಗಿದ್ದವು. ಕೆಲವು ಸಂದರ್ಭಗಳಲ್ಲಿ ಗ್ರಾಮಸಭೆಗಳು ಕೇಂದ್ರ ಸರ್ಕಾರಕ್ಕೆ ಪ್ರಜಾಭಿಪ್ರಾಯವನ್ನು ತಿಳಿಯಪಡಿಸುತ್ತಿದ್ದವು. ರಾಷ್ಟ್ರಕೂಟರಲ್ಲಿ ಗ್ರಾಮಮಹತ್ತರ, ವಿಷಯ ಮಹತ್ತರ ಎಂಬ ಸಲಹಾ ಸಂಸ್ಥೆಗಳೂ ಇದ್ದವು; ಇವುಗಳ ಅಭಿಪ್ರಾಯಗಳಿಗೆ ಅರಸನು ಮನ್ನಣೆ ಕೊಡಬೇಕಾಗಿತ್ತು. ಕೆಲವು ರಾಜ್ಯಗಳಲ್ಲಿ ಗ್ರಾಮಸಭೆಗಳಿಗೆ ಮಹಾಜನಗಳೆಂದೂ ಹೆಸರಿತ್ತು. ಗಂಗ, ಕದಂಬ, ಬಾದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರಿಗೆ ಸಂಬಂಧಪಟ್ಟ ಶಿಲಾಲೇಖನಗಳೂ ಮತ್ತು ತಾಮ್ರಪಟಗಳೂ ಇನ್ನೂ ಹೆಚ್ಚಿನ ವಿವರಗಳನ್ನು ಒದಗಿಸುತ್ತವೆ.

ಕರ್ನಾಟಕ ರಾಜ್ಯಗಳಲ್ಲಿ ಒಂದೊಂದು ಗ್ರಾಮಕ್ಕೆ ಒಂದೊಂದು ಸ್ಥಾನಿಕ ಸಭೆಯಿತ್ತು. ಜಿಲ್ಲೆಯಲ್ಲಿ ಮಹಾನಾಡು ಎಂಬ ಸ್ಥಾನಿಕ ಸಭೆಯಿತ್ತು. ಗ್ರಾಮಸಭೆಗಳನ್ನು ಊರು ಅಥವಾ ಮಹಾಜನವೆಂತಲೂ ಕರೆಯುತ್ತಿದ್ದರು. ಈ

ಸಭೆಗಳಿಗೆ ಸದಸ್ಯರನ್ನೂ ಹಾಗೂ ಸಭೆಗಳ ಪ್ರಮುಖ ಕಾರ್ಯಕರ್ತರನ್ನೂ ನಾಮಕರಣ ಮಾಡುವ ಪದ್ಧತಿ ಇತ್ತೆಂದೂ ಹಾಗೆ ನಾಮಕರಣವಾಗುತ್ತಿದ್ದವರು ಆಯಾಭಾಗದ ಅತ್ಯಂತ ಗಣ್ಯ ವ್ಯಕ್ತಿಗಳೂ ಮತ್ತು ನಿಷ್ಠಾವಂತರೂ ಆಗಿದ್ದರೆಂದೂ, ಸಭೆಗಳು ತಮ್ಮ ತಮ್ಮ ಸ್ಥಾನಿಕ ಆಡಳಿತವನ್ನು ನಡೆಸುವದಲ್ಲದೇ ದತ್ತಿ ಬಿಟ್ಟ ಭೂಮಿಯ ಮೇಲ್ವಿಚಾರಣೆ ಹಾಗೂ ದೇವಾಲಯದ ಆಡಳಿತವನ್ನು ನಿರ್ವಹಿಸುವುದರಲ್ಲಿ ವಿಶ್ವಸ್ತ ಪ್ರತಿನಿಧಿಯಂತೆ (Trustee) ಯಾರೊಬ್ಬರ ಬಲಾತ್ಕಾರಕ್ಕಾಗಿಯಲ್ಲದೆ ಆಡಳಿತ ನಡೆಸುತ್ತಿದ್ದರೆಂದೂ ಹೇಳಬಹುದು. ಈ ವಿಧವಾದ ಸ್ಥಾನಿಕ ಆಡಳಿತ ವ್ಯವಸ್ಥೆಯ ವರ್ಣನೆಯನ್ನು ಮಧ್ಯಯುಗಕ್ಕೆ ಸಂಬಂಧಿಸಿದ ಶಾಸನಗಳು ತಿಳಿಸುವುದರಿಂದ ಅದಕ್ಕೂ ಹಿಂದೆ ಈ ಪದ್ಧತಿಗಳಿದ್ದುವೆಂದು ಹೇಳಲು ಅಡ್ಡಿಯಿಲ್ಲ.

ಕರ್ನಾಟಕ ರಾಜ್ಯಗಳಲ್ಲಿ ಪೌರ ಸಭೆಗಳಿಗೆ ಮಹತ್ವದ ಸ್ಥಾನವಿತ್ತು. ಕದಂಬರಲ್ಲಿ ಪಟ್ಟಣಸೆಟ್ಟಿ ಅಥವಾ ಪಟ್ಟಣಾಧಿಕಾರಿ ಅಥವಾ ಪಟ್ಟಣಸ್ವಾಮಿ ಎಂಬ ಅಧಿಕಾರಿಯನ್ನು ಪಟ್ಟಣಗಳ ಆಡಳಿತಕ್ಕೆ ನೇಮಿಸುತ್ತಿದ್ದರು. ಪಟ್ಟಣಸ್ವಾಮಿ ಎಂಬುವನು ಪ್ರಮುಖ ವರ್ತಕನು. ಗಂಗ ಅರಸರ ಕಾಲದಲ್ಲಿಯೂ ಪಟ್ಟಣದ ಆಡಳಿತವು ವರ್ತಕರ ಶ್ರೇಣಿಯ ಅಧೀನದಲ್ಲಿತ್ತು. ಅರಸರು ಪಟ್ಟಣಗಳಿಗೆ ಕಾನೂನುಗಳನ್ನು ವಿಧಿಸಿ ಘೋಷಣೆ ಹೊರಡಿಸುವ ವಾಡಿಕೆ ಇತ್ತು. ಚಾಲುಕ್ಯರ ಕಾಲದಲ್ಲಿ ಯುವರಾಜ ೧ನೆ ವಿಕ್ರಮಾದಿತ್ಯನು ಪುಲಿಗೆರೆಯ ಮಹಾಜನರಿಗೆ ಪಟ್ಟಣದ ಸೌಕರ್ಯಗಳನ್ನು ಒದಗಿಸುವ ದೆಸೆಯಿಂದ ರಾಜಾಜ್ಞೆಯೊಂದನ್ನು ಹೊರಡಿಸಿದನೆಂದು ತಿಳಿದುಬರುತ್ತದೆ. ರಾಷ್ಟ್ರಕೂಟರಲ್ಲಿ ಪಟ್ಟಣದ ಆಗುಹೋಗುಗಳನ್ನು ನೋಡಿಕೊಳ್ಳಲು

'ಪುರಪತಿ' ಅಥವಾ 'ನಗರಪತಿ' ಎಂಬ ಪ್ರಮುಖನಿದ್ದನು. ವರ್ತಕ ಶ್ರೇಣಿಗಳು ತಮ್ಮ ಕಾರ್ಯಕಾರಿ ಮಂಡಲಿಯ ಮೂಲಕ ಪಟ್ಟಣಗಳ ಆರ್ಥಿಕ ಜೀವನ, ವ್ಯಾಪಾರ ಉದ್ದಿಮೆಗಳ ಅಭಿವೃದ್ಧಿಗೆ ಸಹಾಯ ಒದಗಿಸುತ್ತಿದ್ದವು.

ಕರ್ನಾಟಕದ ರಾಜ್ಯಗಳಲ್ಲಿ ಅಧಿಕ ಪ್ರಮಾಣದಲ್ಲಿ ಸೈನ್ಯ ಬಲವಿತ್ತು. ಸೈನ್ಯದ ೪ ಅಂಗಗಳು--ಕಾಲಾಳು, ಕುದುರೆ, ಆನೆ ಮತ್ತು ರಥ—ನಿಯೋಜಿಸಲ್ಪಟ್ಟಿದ್ದವು- ರಥಗಳನ್ನು ಯುದ್ಧದಲ್ಲಿ ಉಪಯೋಗಿಸುವ ಪದ್ಧತಿ ಕಾಲಕ್ರಮೇಣ ಕಡಿಮೆಯಾಯಿತು. ಚಾಳುಕ್ಯ ಅರಸರ ಸೈನ್ಯದ ವರ್ಣನೆಯನ್ನು ಯುವಾನ್‌ಚ್ವಾಂಗನು ತಿಳಿಸಿರುವನು. ಆತನ ವರ್ಣನೆಯ ಪ್ರಕಾರ ಚಾಲುಕ್ಯ ಸೈನ್ಯದಲ್ಲಿ ಆನೆಗಳ ಉಪಯೋಗ ಅಧಿಕವಾಗಿತ್ತೆಂದು ಕಂಡುಬರುತ್ತದೆ. ರಾಜ್ಯದಲ್ಲಿ ಶಾಂತಿ ಸ್ಥಾಪನೆ ಏಳಿಗೆ ಮತ್ತು ಸಮೃದ್ಧಿಯುಂಟಾಗಲು ಸೈನಿಕ ಶಕ್ತಿ ಬಹಳ ಅಗತ್ಯವೆಂದು ಅರಿತು ಬಾದಾಮಿ ಚಾಲುಕ್ಯರು 'ಕರ್ನಾಟಕ ಬಲ'ವನ್ನು ವ್ಯವಸ್ಥೆಗೊಳಿಸಿದ್ದರು; ಈ ಸೈನ್ಯ ಬಲದ ಪ್ರತಾಪವು ಆಗಿನ ಕಾಲದ ಇತರ ಸೈನ್ಯ ವ್ಯವಸ್ಥೆಗಿಂತ ಉತ್ತಮವಾಗಿದ್ದಿತೆಂಬ ಅಭಿಪ್ರಾಯವಿದೆ. ಚಾಲುಕ್ಯರ ಅರಸ ೨ನೆ ಪುಲಕೇಶಿಯು ಈ ಸೈನ್ಯ ಬಲದಿಂದಲೇ ದಿಗ್ವಿಜಯವನ್ನು ಪೂರ್ಣಮಾಡಿ 'ಪರಮೇಶ್ವರ' ಎಂಬ ಬಿರುದನ್ನು ಧರಿಸುವುದಲ್ಲದೇ ಮೂರು ಮಹಾರಾಷ್ಟ್ರಗಳ ಏಕೈಕ ಅಧಿಪತಿಯೆನಿಸಿದನು; ಮೈತ್ರಿ ಸೂಚಕವಾಗಿ ಪರ್ಶಿಯಾ ದೇಶದಿಂದ ೨ನೆ ಖುಸ್ರುವು ಕಳುಹಿಸಿದ ರಾಯಭಾರವನ್ನು ೨ನೆ ಪುಲಕೇಶಿಯು ಸ್ವೀಕರಿಸಿದನು.

ಇಂತಹ ಸೈನ್ಯಬಲದಿಂದಲೇ ಕರ್ನಾಟಕದಲ್ಲಿ ೮ ಶತಮಾನಗಳ ವರೆಗೆ ಅರಸರು ದೊಡ್ಡ ದೊಡ್ಡ ರಾಜ್ಯಗಳನ್ನು ಕಟ್ಟಿ ತಮ್ಮ ನೆರೆಹೊರೆಯ ಶತ್ರುಗಳೊಡನೆ ಯುದ್ಧ ಮಾಡಿ ಕೀರ್ತಿಶಾಲಿಗಳೂ, ಪ್ರತಿಭಾನ್ವಿತರೂ ಆದರು; ಈ ಬಲದಿಂದಲೇ ರಾಜಕುಮಾರರೂ, ಸೇನಾಪತಿಗಳೂ ತಮ್ಮ ತಮ್ಮ ರಾಜ್ಯಕ್ಕೆ ವಿಸ್ತಾರವಾದ ಭೂಭಾಗಗಳನ್ನು ದಿಗ್ವಿಜಯಗಳ ಮೂಲಕ ಸೇರಿಸಿಕೊಂಡರು; 'ಕರ್ನಾಟಕ' ಎಂಬ ಹೆಸರೇ ಶ್ರೇಷ್ಠ ಸೈನ್ಯ ವ್ಯವಸ್ಥೆ, ಪರಾಕ್ರಮ ಮತ್ತು ಹಿಂದೆಂದೂ ಇಲ್ಲದಂಥ ಸೈನಿಕ ದಕ್ಷತೆಗೆ ಹೆಸರು ಪಡೆಯಿತೆಂದು ತಿಳಿದು ಬರುತ್ತದೆ. ಕನ್ನಡನಾಡಿನ ಯೋಧರ ಗುಣಗಳನ್ನು ಕ್ರಿ. ಶ. ೯೦೦ ರಲ್ಲಿದ್ದ ರಾಜಶೇಖರನೆಂಬ ಕವಿಯು ವರ್ಣಿಸಿದ್ದಾನೆ.

ಕರ್ನಾಟಕ ಬಲದ ವ್ಯವಸ್ಥೆ, ಯುದ್ಧ ನೀತಿ ಮತ್ತು ಕ್ರಮಗಳನ್ನನುಸರಿಸಿ ಚಾಲುಕ್ಯರ ತರುವಾಯ ಆಳಿದ ಅರಸರು ನಮ್ಮ ಸೈನ್ಯ ಪದ್ಧತಿಯನ್ನು ವ್ಯವಸ್ಥೆಗೊಳಿಸಿದರೆಂದರೆ ಅತಿಶಯೋಕ್ತಿಯಲ್ಲ.

ಭಾರತೀಯ ಸಂಸ್ಕೃತಿಯ ಬೆಳವಣಿಗೆಗೆ ಮತ್ತು ರಾಜ್ಯ ಪದ್ಧತಿಗಳ ಪ್ರಗತಿಗೆ ಕರ್ನಾಟಕದ ಕೊಡುಗೆ ಅಪಾರವೆನಿಸಿದೆ.

ಕರ್ನಾಟಕ ರಾಜ್ಯಗಳೂ ಕೂಡ ಭಾರತ ಪರಂಪರೆಯನ್ನನುಸರಿಸಿ ಶಾಂತಿ, ನ್ಯಾಯ, ಪ್ರಜಾಹಿತ ಮತ್ತು ಪ್ರಜಾಕಲ್ಯಾಣವನ್ನು ಸಾಧಿಸುವುದರಲ್ಲಿ ಸಮರ್ಥವಾಗಿದ್ದುವೆಂಬ ವಿಷಯವು ಸ್ಪಷ್ಟವಾಗಿ ತಿಳಿದುಬರುತ್ತದೆ.

ಗ್ರಂಥ ಋಣ

R. Shama Sastry—
Kautilya's Arthasastra (Eng. Tran.)

P. V. Kane—
History of Dharmasastra Vol. III

K.P. Jayaswal— Hindu Polity

Ghosal— A History of Indian Political Ideas.

Altekar—
State and Government in Ancient India

Dr. P. B. Desai— ಕನ್ನಡ ನಾಡಿನ ಶಾಸನಗಳು.

Karnatak University Journal (Humanities) June 1961.

Article on 'Historical glimpses of Karnatak'—
by Dr. P. B .Desai

Dr. G. S. Dikshit— Local Self Government in Mediaeval Karnatak

R. S. Tripathi— History of Ancient India

Prof. G. S. Halappa—
Studies in State Administration

N. N. Law—
Inter State relations in Ancient India

ಕರ್ನಾಟಕ ದರ್ಶನ—

Dr. S. Sreekanta Sastry— ಭಾರತೀಯ ಸಂಸ್ಕೃತಿ

K. V. Rangaswami Iyengar—
Some aspects of Ancient Indian Polity

Dr. M. V. Krishna Rao—
Glimpses of Karnatak

ಪ್ರತಿಜ್ಞಾಂ ಚಾಭಿರೋಹಸ್ವ ಮನಸಾ ಕರ್ಮಣಾ ಗಿರಾ ।
ಪಾಲಯಿಷ್ಯಾಮ್ಯಹಂ ಭೌಮಂ ಬ್ರಹ್ಮ ಇತ್ಯೇವ ಚಾಸ
ಕೃತ್ ॥
ಯಶ್ಚಾತ್ರ ಧರ್ಮೋ ನೀತ್ಯುಕ್ತೋ ದಂಡನೀತಿವ್ಯಪಾಶ್ರಯಃ ।
ತಮಶಂಕಃ ಕರಿಷ್ಯಾಮಿ ಸ್ವವಶೋ ನ ಕದಾಚನ ॥

– **ಮಹಾಭಾರತ**

ಪ್ರಜಾಸುಖೇ ಸುಖಂ ರಾಜ್ಞಃ ಪ್ರಜಾನಾಂ ಚ ಹಿತೇ ಹಿತಮ್ ।
ನಾತ್ಮಪ್ರಿಯಂ ಹಿತಂ ರಾಜ್ಞಃ ಪ್ರಜಾನಾಂ ತು ಪ್ರಿಯಂ
ಹಿತಮ್ ॥

– **ಅರ್ಥಶಾಸ್ತ್ರ**

‘ ಧರ್ಮೇಣ ವರ್ಧತೇ ರಾಜ್ಯಂ ’

– **ಕಾಮಂದಕ**

೨೬. ಜೀವನದಲ್ಲಿ ನಗೆ (,,) –ಎಂ. ಎಸ್. ಸುಂಕಾಪುರ

೨೭. ಬಸವಣ್ಣನವರ ಯೋಜನೆಗಳು (,,) –ಬಿ. ಸಿ. ಜವಳಿ

೨೮. ೧೮೫೭ರ ಕ್ರಾಂತಿ (,,) –ಸಿ. ವೀರಬಸಣ್ಣ

೨೯. ಕನ್ನಡ ಕಥಾಸೃಷ್ಟಿ –ಬಿ. ಬಿ. ಮಹೀಶವಾಡಿ

೩೦. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ –ಕೆ. ಕೃಷ್ಣಮೂರ್ತಿ

೩೧. ನೀರಾವರಿ ಬೇಸಾಯ –ಎಸ್. ಎ. ಹೊಸಮನಿ

೩೨. ಸಾರ್ವಜನಿಕ ಅಭಿಪ್ರಾಯ –ಎನ್. ರಾಜಗೋಪಾಲರಾವ್

೩೩. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ
–ದೇವೇಂದ್ರಕುಮಾರ ಹಕಾರಿ

೩೪. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ
–ಜಿ. ಡಿ. ನಾಡಕರ್ಣಿ

೩೫. ಫ್ಯಾಶನ್ನುಗಳು (ದ್ವಿ. ಆ.) –ಕೆ. ಡಿ. ತಂಗೋಡ

೩೬. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ
–ಬಿ. ವ್ಹಿ. ಮಲ್ಲಾಪುರ

೩೭. ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ
–ಎಸ್. ಜಿ. ಕರಭಂಟನಾಳ

೩೮. ಕನ್ನಡ ಜೈನ ಪುರಾಣಗಳು –ಎಸ್. ಎನ್. ನಾಯಕ

೩೯. ಕನ್ನಡ ನಾಟ್ಯಸೃಷ್ಟಿ –ಎಚ್. ಜಿ. ಲೋಕೂರ

೪೦. ಹರಿಹರನು ಚಿತ್ರಿಸಿದ ಶಿವಶರಣೆಯರು –ಬಿ. ಬಿ. ಹೆಂಡಿ

೪೧. ನೀವು ಬಯಸುವ ಮಗು ಗಂಡೊ ? ಹೆಣ್ಣೊ ?
–ಕೆ. ಆರ್. ರಾಮಸ್ವಾಮಿ

೪೨. ಆಂಡಯ್ಯ –ಬಿ. ಎಸ್. ಕುಲಕರ್ಣಿ

೪೩. ಬೆಳವಲನಾಡಿನ ಬೆಳೆಗಳು –ಎಸ್. ಎ. ಹೊಸಮನಿ

೪೪. ಜಾನಪದ ಕಥೆಗಳು –ಎಲ್. ಆರ್. ಹೆಗಡೆ

೪೫. ಸುಧಾರಿಸಿದ ಬೇಸಾಯ –ಎ. ಸಿ. ಕಲ್ಯಾಣಿಮಠ

೪೬. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು
–ಬಿ. ಆರ್. ಗೋಪಾಲ

೪೭. ಗ್ರಂಥಾಲಯದ ಅಂತರಂಗ –ಎಸ್. ಆರ್. ಗುಂಜಾಳ

೪೮. ಸ್ತ್ರೀ ಮತ್ತು ಶಿಕ್ಷಣ –ವನಮಾಲಾ ಆಚಾರ್

೪೯. ಜಾಗತಿಕ ಸರಕಾರ –ಸಿ. ವೀರಬಸಣ್ಣ

೫೦. ಸಮುದಾಯ ಸಂಘಟನೆ –ಎಚ್. ಎಂ. ಮರುಳಸಿದ್ಧಯ್ಯ

೫೧. ಅಶೋಕನ ಧರ್ಮಶಾಸನಗಳು —ಶ್ರೀನಿವಾಸ ರಿತ್ತಿ

೫೨. ಪ್ರಾಚೀನ ಭಾರತದ ರಾಜ್ಯಪದ್ಧತಿ (ದ್ವಿ. ಆ.) —ಸಿ. ವ್ಹಿ. ರಂಗಸ್ವಾಮಿ

೫೩. ಅಕ್ಕಮಹಾದೇವಿ ಮತ್ತು ಮೀರಾಬಾಯಿ —ಎಸ್. ಎಸ್. ಕಬ್ಬಿನ

೫೪. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ —ಬಿ. ಬಿ. ಮಹೀಶವಾಡಿ

೫೫. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು —ಬಿ. ಸಿ. ಜವಳಿ

೫೬. ಭಾರತ ರಾಜ್ಯಘಟನೆ —ಎಂ. ಎಸ್. ಪಾಟೀಲ

೫೭. ಪಂಚಾಯತಿ ರಾಜ್ಯ —ಎಸ್. ಜಿ. ಕರಭಂಟನಾಳ ಮತ್ತು —ಕೆ. ಡಿ. ಬಸವ

೫೮. ವಿಷಮಜ್ವರ —ಪಿ. ಎಸ್. ಶಂಕರ

೫೯. ಪುಸ್ತಕ ಭಾಂಡಾರ ಕಾಯದೆ —ಜಿ. ಎಂ. ಪಾಟೀಲ

೬೦. ಸರ್ ಐಸಾಕ್ ನ್ಯೂಟನ್ —ಆರ್. ವ್ಹಿ. ಅಬ್ಬಿಗೇರಿ

೬೧. ಗ್ರಾಮಾಭ್ಯುದಯದ ಯೋಜನಾಂಗಗಳು —ಟಿ. ಕೆ. ಮೇಟಿ

೬೨. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ —ಎಸ್. ಕೆ. ಕರೆತೋಟದ

೬೩. ರಾಸಾಯನಿಕ ಕಿಣ್ವಗಳು —ಎಂ. ಎಸ್. ಎಸ್. ರಾವ್

೬೪. ಪ್ರಜಾಪ್ರಭುತ್ವದ ಮೂಲತತ್ವಗಳು —ಕೆ. ಬಿ. ಬಕ್ಕಪ್ಪ

೬೫. ಹೃದಯಾಘಾತ — ಪಿ. ಎಸ್. ಶಂಕರ್

೬೬. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ —ಡಿ. ಎ. ಚಿಕ್ಕಿ

೬೭. ಶ್ರೀ ರಾಮಾಯಣ ದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು —ಎಂ. ಜಿ. ಬಿರಾದಾರ

೬೮. ಯೋಜನೆಗಳೇಕೆ ಬೇಕು ? —ಎಸ್. ಎಸ್. ಯಮ್ಮಿ

೬೯. ಸಗರನಾಡಿನ ಶಿವಶರಣರು —ವ್ಹಿ. ಶಿವಾನಂದ

೭೦. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ —ಆರ್. ಎಸ್. ಭೂಸನೂರಮಠ

೭೧. ವಿಜಯನಗರದ ನಿರ್ಣಾಯಕ ಯುದ್ಧ —ಎಸ್. ಬಿ. ಕೋಡದ

೭೨. ಬಸವಣ್ಣನವರನ್ನು ಕುರಿತ ಶಾಸನಗಳು —ಎಂ. ಎಂ. ಕಲಬುರ್ಗಿ

೭೩. ಆಧುನಿಕ ಭಾಷಾ ವಿಜ್ಞಾನ —ಜಿ. ಎಸ್. ಕುಳ್ಳಿ

ಬೆಲೆ ಪ್ರತಿ ಒಂದಕ್ಕೆ ೨೫ ಪೈಸೆ